ನಿಮ್ಮೂರು ಸುದ್ದಿ

ಕನ್ನಡ ದಿನ ಪತ್ರಿಕೆ NIMMURU SUDDI

ಸಂಪಾದಕರು: ಸುಂದರ್ Editor : Sundar

ಏಕ ಕಾಲಕ್ಕೆ ಬಳ್ಳಾರಿ, ಕೊಪ್ಪಳ, ಯಾದಗಿರಿ, ರಾಯಚೂರು, ಕಲಬುರ್ಗಿ, ಬೀದರ, ವಿಜಯನಗರ ಜಿಲ್ಲೆಗಳಲ್ಲಿ ಪ್ರಕಟ

Volume: 01, Issue: 10 RNI Number : KNKAN/25/A2770 10-01-2026 Saturday Page 04, Price 2/- suddinimmuru@gmail.com Mob:-8660146563

ಸಂಪುಟ :01 ಸಂಚಿಕೆ :10 ರಾಯಚೂರು 10-01-2026 ಶನಿವಾರ ಪುಟ 04 ಬೆಲೆ ರೂ.2/- ಮೊ:8660146563

ಬಜೆಟ್‌ವರೆಗೆ ನಾಯಕತ್ವ ಬದಲಾವಣೆ ಆಗುವುದಿಲ್ಲ: ಕೆ.ಎನ್.ರಾಜಣ್ಣ



ಬೆಂಗಳೂರು,ಜ.09-

ಬಜೆಟ್‌ವರೆಗೆ ಏನೂ ಆಗುವುದಿಲ್ಲ. ಅಲ್ಲಿವರೆಗೆ ಏನೂ ಮಾತನಾಡೋಕೆ ಹೋಗಬೇಡಿ. ಮಾರ್ಚ್ 31ರ ವರೆಗೆ ಕಲ್ಪನೆಗಳು ಬೇಡ ಎಂದು ಮಾಜಿ ಸಚಿವ ಕೆ.ಎನ್.ರಾಜಣ್ಣ ತಿಳಿಸಿದ್ದಾರೆ.

ಬೆಂಗಳೂರಲ್ಲಿಂದು ಮಾತನಾಡಿದ ಅವರು, ರಾಜಕಾರಣದಲ್ಲಿ ಯಾವುದೇ ಬದಲಾವಣೆ ಆಗುವುದಿಲ್ಲ. ಬಜೆಟ್‌ವರೆಗೆ ಏನೂ ಆಗದು. ಅಲ್ಲಿಯವರೆಗೆ ಏನೂ ಮಾತನಾಡೋಕೆ ಹೋಗಬೇಡಿ. ಮಾರ್ಚ್ 31ರ ವರೆಗೆ ಕಲ್ಪನೆ ಬೇಡ. ಸಿದ್ದರಾಮಯ್ಯನವರು ಈಗಲೂ ಇರಬೇಕು, 2028ಕ್ಕೂ ಇರಬೇಕು ಅಂತ ಹೇಳಿದ್ದೇನೆ. ಅದರ ಬಗ್ಗೆ ಯಾಕೆ ನೀವು ಹೇಳಲ್ಲ ಎಂದರು.

ಸಿಎಂ ವೈರಾಗ್ಯದ ಮಾತು ವಿಚಾರವಾಗಿ ಪ್ರತಿಕ್ರಿಯಿಸಿ, ಡಿಕೆಶಿ ವೈರಾಗ್ಯದ ಮಾತು ಹೇಳಿಲ್ವಾ?. ಕಾರ್ಯಕರ್ತನಾಗಿ ಇರ್ತೇನೆ ಅಂತ ಹೇಳಿಲ್ವಾ?. ಕಾರ್ಯಕರ್ತ ಪರ್ಮನೆಂಟ್. ರಾಜಕಾರಣ ನಿಂತ ನೀರಲ್ಲ. ಚಲನಶೀಲತೆಯೇ ರಾಜಕಾರಣ. ಇವರಲ್ಲಿ ಯಾರ್ಯಾರು ಏನೇನಾಗ್ತಾರೆ ಗೊತ್ತಿಲ್ಲ. ಈಗಲೇ ಎಲ್ಲವನ್ನೂ ಊಹೆ ಮಾಡೋಕೆ ಆಗಲ್ಲ. ಸಿದ್ದರಾಮಯ್ಯ ಅವರ ಅಭಿಪ್ರಾಯವನ್ನು ಹೈಕಮಾಂಡ್ ಪರಿಗಣಿಸಬಹುದು ಎಂದು ತಿಳಿಸಿದರು.

ಸತೀಶ್ ಜಾರಕಿಹೊಳಿ ಭೇಟಿ ವಿಚಾರಕ್ಕೆ, ರಾಜನಹಳ್ಳಿ ವಾಲ್ಮೀಕಿ ಜಾತ್ರೆ ಇದೆ. ಬಸನಗೌಡ ದದ್ದಲ್ ಅದಕ್ಕೆ ಅಧ್ಯಕ್ಷರು. ಅದರ ಪೂರ್ವಭಾವಿ ತಯಾರಿ ಸಭೆ ಕರೆದಿದ್ದಾರೆ. ಅಲ್ಲಿ ಪ್ರೆಸ್‌ಮೀಟ್ ಕೂಡ ಇದೆ. ಅದಕ್ಕೆ ನಾವೆಲ್ಲರೂ ಹೋಗಬೇಕಿತ್ತು. ಕಾರಣಾಂತರಗಳಿಂದ ಹೋಗೋಕೆ ಆಗಿಲ್ಲ. ಜಾತ್ರೆ ಯಶಸ್ವಿ ಗೆ ಎಲ್ಲರೂ ಸಹಕಾರ ಕೊಡಬೇಕು. ಅದಕ್ಕೆ ಭೇಟಿಯಾಗಿದ್ದೆವು ಎಂದು ತಿಳಿಸಿದರು.

ಡಿಕೆಶಿ ಹಸ್ತಕ್ಷೇಪದ ಬಗ್ಗೆ ಹೆಚ್‌ಡಿಕೆ ಆರೋಪದ ವಿಚಾರವಾಗಿ ಪ್ರತಿಕ್ರಿಯಿಸಿ, ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿದ್ರು. ಆಗ ಎಷ್ಟು ಖಾತೆಯಲ್ಲಿ ಹಸ್ತಕ್ಷೇಪ ಮಾಡಿದ್ರು?. ಅದರ ದೊಡ್ಡ ಲಿಸ್ಟೇ ಕೊಡ್ತೇನೆ. ಒಬ್ಬ ಹಿರಿಯ ಸಚಿವರಾಗಿ ಸಲಹೆ ಕೊಡಲು ಅಧಿಕಾರವಿದೆ. ಜನರ ಹಿತದೃಷ್ಟಿಯಿಂದ ಅಧಿಕಾರ ಇದೆ. ಸಾಮಾನ್ಯರಿಂದ ಸಚಿವರಿಗೂ ಅಧಿಕಾರ ಇದೆ. ಬಳ್ಳಾರಿ ಪರಿಸ್ಥಿತಿ ತಿಳಿ ಮಾಡೋಕೆ ಏನು ಮಾಡಬೇಕು. ಆ ಮಾಹಿತಿ ಆಧರಿಸಿ ಕೆಲ ಸಲಹೆಗಳನ್ನು ನೀಡಿರ್ತಾರೆ. ಅದೇ ಆದೇಶಗಳು ಆಗೋದಿಲ್ಲ ಎಂದರು.

ಸಚಿವ ಸಂಪುಟ ಪುನಾರಚನೆ ವಿಚಾರವಾಗಿ ಪ್ರತಿಕ್ರಿಯಿಸುತ್ತಾ, ಸಿಎಂ ದೆಹಲಿಗೆ ಹೋಗಬೇಕು, ಅವರು ರಾಹುಲ್ ಗಾಂಧಿ ಅವರನ್ನು ಭೇಟಿ ಮಾಡಬೇಕು. ಆ ನಂತರ ಅದಕ್ಕೆ ಚಾಲನೆ ಸಿಗಲಿದೆ ಎಂದರು.

ಕೆಪಿಸಿಸಿ ಅಧ್ಯಕ್ಷ ಸ್ಥಾನ ಬದಲಾವಣೆ ವಿಚಾರವಾಗಿ ಮಾತನಾಡುತ್ತಾ, ಕೆಪಿಸಿಸಿ ಅಧ್ಯಕ್ಷ ಸ್ಥಾನಕ್ಕೆ ಈಗಲೂ ನಾನು ಆಕಾಂಕ್ಷಿ. ಸರ್ಕಾರ, ಪಕ್ಷದಲ್ಲಿ ಏನೇ ಆಗಲಿ, ಅಂತಿಮವಾಗಿ ಹೈಕಮಾಂಡ್ ತೀರ್ಮಾನ ಮಾಡುತ್ತದೆ. ಡಿಕೆಶಿ ನನಗೆ ಮೊದಲಿನಿಂದಲೂ ಸ್ನೇಹಿತರು. ನಾವೆಲ್ಲೋ ಹೋಗಿರ್ತೇವೆ, ಎಲ್ಲ ಹೇಳೋಕೆ ಆಗುತ್ತಾ ಎಂದು ಮರುಪ್ರಶ್ನಿಸಿದರು.

ಅಪೆಕ್ಸ್ ಬ್ಯಾಂಕ್ ಅಧ್ಯಕ್ಷ ಸ್ಥಾನದ ವಿಚಾರಕ್ಕೆ, ನಾನು ನಿರ್ದೇಶಕ ಸ್ಥಾನಕ್ಕೆ ನಾಮಪತ್ರ ಹಾಕಬೇಕು. ಸೋಮವಾರ ನಾಮಪತ್ರ ಸಲ್ಲಿಸ್ತೇನೆ. ಡೈರೆಕ್ಟರ್ ಆದ ಮೇಲೆ ಮುಂದೆ ಎಲ್ಲವೂ ಬರುತ್ತದೆ. 19 ಜನ ನಿರ್ದೇಶಕರಿದ್ದಾರೆ. ಕೋಲಾರ, ಬಾಗಲಕೋಟೆಗೆ ಇನ್ನೂ ಆಗಿಲ್ಲ. ನೋಡೋಣ, ಅಂತಿಮವಾಗಿ ಪಕ್ಷ ಏನು ಮಾಡುತ್ತೆ ಅಂತ ಎಂದರು.

ಬಾಕಿ ಆರ್‌ಟಿಇ ಅನುದಾನ ತಕ್ಷಣ ಬಿಡುಗಡೆಗೆ ಒತ್ತಾಯ



ರಾಯಚೂರು,ಜ.09-

ಆರ್.ಟಿ.ಇ (ಶಿಕ್ಷಣ ಹಕ್ಕು ಕಾಯ್ದೆ) ಯೋಜನೆಯಡಿ ಖಾಸಗಿ ಶಾಲೆಗಳಿಗೆ ನೀಡಬೇಕಾದ ಬಾಕಿ ಅನುದಾನವನ್ನು ಕೂಡಲೇ ಮಂಜೂರು ಮಾಡಬೇಕು ಎಂದು ರಾಯಚೂರು ಖಾಸಗಿ ಅನುದಾನ ರಹಿತ ಶಾಲಾ ಆಡಳಿತ ಮಂಡಳಿ (ರುಸ್ಮಾ) ಅಧ್ಯಕ್ಷ ರಾಜಾ ಶ್ರೀನಿವಾಸ ಒತ್ತಾಯಿಸಿದರು.

ಇಂದು ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದ ಅವರು, 2024-25ನೇ ಸಾಲಿನ ಅನುದಾನ ಬಿಡುಗಡೆ ವಿಳಂಬದಿಂದ ಖಾಸಗಿ ಶಾಲೆಗಳ ದೈನಂದಿನ ನಿರ್ವಹಣೆ, ಶಿಕ್ಷಕರ ವೇತನ ಪಾವತಿ ಹಾಗೂ ಮಕ್ಕಳ ಶಿಕ್ಷಣದ ಮೇಲೆ ಗಂಭೀರ ದುಷ್ಪರಿಣಾಮ ಉಂಟಾಗಿದೆ ಎಂದು ಆತಂಕ ವ್ಯಕ್ತಪಡಿಸಿದರು. ಕಳೆದ 10 ತಿಂಗಳಿಂದ ಅನುದಾನ ಬಾಕಿಯಾಗಿದ್ದು, ಇದರಿಂದ ಆರ್ಥಿಕ ಸಂಕಷ್ಟ ಎದುರಿಸುತ್ತಿರುವ ಶಾಲೆಗಳು ಕಾರ್ಯನಿರ್ವಹಿಸಲು ಅಸಾಧ್ಯವಾಗುತ್ತಿದೆ ಎಂದು ಹೇಳಿದರು.

ಮಕ್ಕಳಿಗೆ ಉಚಿತ ಮತ್ತು ಗುಣಮಟ್ಟದ ಶಿಕ್ಷಣ ಒದಗಿಸುವ ಉದ್ದೇಶದಿಂದ ಜಾರಿಗೆ ತಂದಿರುವ ಆರ್‌ಟಿಇ ಕಾಯ್ದೆಯ ಆಶಯವೇ ಅನುದಾನ ವಿಳಂಬದಿಂದ ಹಾನಿಗೊಳಗಾಗಿದೆ ಎಂದು ದೂರಿದ ಅವರು, ಸರ್ಕಾರ ಕೂಡಲೇ ಬಾಕಿ ಹಣವನ್ನು ಬಿಡುಗಡೆ ಮಾಡಿ, ಮುಂದಿನ ದಿನಗಳಲ್ಲಿ ಇಂತಹ ವಿಳಂಬಗಳು ಮರುಕಳಿಸದಂತೆ ಶಾಶ್ವತ ಪರಿಹಾರ ಕೈಗೊಳ್ಳಬೇಕೆಂದು ಆಗ್ರಹಿಸಿದರು.

ಆರ್‌ಟಿಇ ವಿದ್ಯಾರ್ಥಿಗಳ ಭವಿಷ್ಯವನ್ನು ಗಮನದಲ್ಲಿಟ್ಟುಕೊಂಡು ತ್ವರಿತ ನಿರ್ಧಾರ ಕೈಗೊಳ್ಳದಿದ್ದಲ್ಲಿ ಪೋಷಕರು ಹಾಗೂ ವಿದ್ಯಾರ್ಥಿಗಳೊಂದಿಗೆ ಜಿಲ್ಲಾಧಿಕಾರಿಗಳ ಕಚೇರಿ ಮುಂಭಾಗದಲ್ಲಿ ಪ್ರತಿಭಟನೆ ನಡೆಸಲಾಗುವುದು ಎಂದು ಎಚ್ಚರಿಸಿದರು. ಕಳೆದ ಶೈಕ್ಷಣಿಕ ವರ್ಷದಲ್ಲಿ ಜಿಲ್ಲೆಗೆ ಸುಮಾರು 5 ಕೋಟಿ ರೂ. ಅನುದಾನ ಬರಬೇಕಾಗಿದ್ದರೂ ಕೇವಲ 2 ಕೋಟಿ ರೂ. ಮಾತ್ರ ಬಿಡುಗಡೆಯಾಗಿದ್ದು, ಉಳಿದ ಮೊತ್ತವನ್ನು ತ್ವರಿತವಾಗಿ ಬಿಡುಗಡೆ ಮಾಡಬೇಕೆಂದು ಮನವಿ ಮಾಡಿದರು.

ಇದೇ ವೇಳೆ, 25 ವರ್ಷಗಳ ಬಳಿಕ ಜಿಲ್ಲೆಯಲ್ಲಿ ನಡೆಯುತ್ತಿರುವ ಜಿಲ್ಲಾ ಉತ್ಸವದಲ್ಲಿ ಖಾಸಗಿ ಶಾಲೆಗಳನ್ನೂ ಪರಿಗಣಿಸಬೇಕೆಂದು ಅವರು ಕೋರಿದರು. ಸುದ್ದಿಗೋಷ್ಠಿಯಲ್ಲಿ ಶೇಖರ ರಾಂಪುರೆ, ಎಸ್.ಕೆ. ನಾಗಿರೆಡ್ಡಿ, ಎಂ. ವೆಂಕಟೇಶ್, ರಾಮಾಂಜಿನೇಯ್ಯ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಜ.11 ರಂದು ಜಿಲ್ಲಾ ಹನಿಗವನ ಸಂಕಲನ ದನಿಗೂಡು ಕೃತಿ ಲೋಕಾರ್ಪಣೆ



ರಾಯಚೂರು,ಜ.09-

ರಾಯಚೂರು ಜಿಲ್ಲಾ ಹನಿಗವನ ಸಂಕಲನ ದನಿಗೂಡು ಕೃತಿಯ ಲೋಕಾರ್ಪಣೆ ಸಮಾರಂಭವು ಜನವರಿ 11, 2026 ಭಾನುವಾರ ಬೆಳಿಗ್ಗೆ 10.00 ಗಂಟೆಗೆ ನಗರದ ಟ್ಯಾಗೋರ ಭವನ, ಎಸ್.ಆರ್.ಕೆ. ಶಿಕ್ಷಣ ಮಹಾವಿದ್ಯಾಲಯ (ಅಂಬೇಡ್ಕರ್ ವೃತ್ತ), ರಾಯಚೂರುನಲ್ಲಿ ನಡೆಯಲಿದೆ ಎಂದು ಹಿರಿಯ ಸಾಹಿತಿಗಳು ಹಾಗೂ ಹೊಸಮನಿ ಪ್ರಕಾಶನದ ಸಂಪಾದಕರಾದ ಬಶೀರ ಅಹ್ಮದ್ ಹೊಸಮನಿ ಅವರು ತಿಳಿಸಿದ್ದಾರೆ.

ಇಂದು ನಗರದ ಪತ್ರಿಕಾ ಭವನದಲ್ಲಿ ನಡೆದ ಸುದ್ದಿಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದ ಅವರು, ಈ ಕಾರ್ಯಕ್ರಮವನ್ನು ಹಿರಿಯ ಸಾಹಿತಿಗಳು ಹಾಗೂ ವಿದ್ವಾಂಸರಾದ ವೀರಹನುಮಾನ ಅವರು ಉದ್ಘಾಟಿಸಲಿದ್ದು, ಕೃತಿಯನ್ನು ಮಹಾಂತೇಶ ಮಸ್ತಿ (ಹಿರಿಯ ಸಾಹಿತಿಗಳು, ಮಾಜಿ ಅಧ್ಯಕ್ಷರು - ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ರಾಯಚೂರು) ಅವರು ಲೋಕಾರ್ಪಣೆ ಮಾಡಲಿದ್ದಾರೆ ಎಂದರು.

ಸಮಾರಂಭದ ಅಧ್ಯಕ್ಷತೆಯನ್ನು ತಾಯರಾಜ ಮರ್ಚಟ್ವಾಳ (ಕವಿಗಳು, ಅಧ್ಯಕ್ಷರು - ಜಿಲ್ಲಾ ದಲಿತ ಸಾಹಿತ್ಯ ಪರಿಷತ್ತು, ರಾಯಚೂರು) ವಹಿಸಲಿದ್ದು, ಕೃತಿ ಪರಿಚಯವನ್ನು ವೈ.ಬಿ. ಹಾಲಬಾವಿ (ಹಿರಿಯ ಕವಿಗಳು, ಶಕ್ತಿನಗರ - ಬೆಂಗಳೂರು) ಅವರು ಮಾಡಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಆರ್.ಗುರುನಾಥ (ಜಿಲ್ಲಾಧ್ಯಕ್ಷರು, ಕಾರ್ಯನಿರತ ಪತ್ರಕರ್ತರ ಸಂಘ, ರಾಯಚೂರು), ವಿರುಪಾಕ್ಷಿ ಬಿ.ಎಂ. (ಪ್ರಾಂಶುಪಾಲರು, ಎಸ್.ಆರ್.ಕೆ. ಶಿಕ್ಷಣ ಮಹಾವಿದ್ಯಾಲಯ, ರಾಯಚೂರು), ರಾಮಣ್ಣ ಮ್ಯಾದಾರ (ಪ್ರಧಾನ ಕಾರ್ಯದರ್ಶಿಗಳು, ಜಿಲ್ಲಾ ಕನ್ನಡ ಕ್ರಿಯಾ ಸಮಿತಿ, ರಾಯಚೂರು), ನಿಜಾಮುದ್ದೀನ್ (ಅಧ್ಯಕ್ಷರು, ಗಡಿನಾಡು ಕನ್ನಡ ಸಂಘ) ಸೇರಿದಂತೆ ಹಲವರು ಭಾಗವಹಿಸಲಿದ್ದಾರೆ ಎಂದು ತಿಳಿಸಿದರು.

ಕವಿಗಳು, ಲೇಖಕರು, ಸಾಹಿತ್ಯಾಸಕ್ತರು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ಬಶೀರ ಅಹ್ಮದ್ ಹೊಸಮನಿ ಅವರು ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಪರ್ವಿನಬೇಗಂ ಹೊಸಮನಿ, ರಾಮಣ್ಣ ಮ್ಯಾದಾರ, ಬಸವರಾಜ, ರುದ್ರಯ್ಯ ಗಣ್ಣಾರಿ ಸೇರಿದಂತೆ ಹೊಸಮನಿ ಪ್ರಕಾಶನದ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಅಪೂರ್ಣ ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳು 15 ರ ಒಳಗಾಗಿ ಪೂರ್ಣಗೊಳಿಸಲು ಅವಕಾಶ - ಗೋಕುಲ ಸಾಬ್

ಸಿರವಾರ, ಜ.09-

ಸಿರವಾರ ಶಿಶು ಅಭಿವೃದ್ಧಿ ಯೋಜನೆ ವ್ಯಾಪ್ತಿಯಲ್ಲಿ ಖಾಲಿ ಇರುವ ಅಂಗನವಾಡಿ ಕೇಂದ್ರಗಳಿಗೆ ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯರ ಹುದ್ದೆಗಳನ್ನು ಆನ್ಲೈನ್ ವೆಬ್ಸೈಟ್ ಮೂಲಕ ಅರ್ಜಿಯನ್ನು ಆಹ್ವಾನಿಸಲಾಗಿತ್ತು.

ದಿನಾಂಕ:-08-12-2025 ರಿಂದ 07-01-2026ರ ವರೆಗೆ ಅರ್ಜಿ ಸಲ್ಲಿಸಲು ಕಾಲಾವಕಾಶ ನೀಡಲಾಗಿರುತ್ತದೆ, ಪ್ರಸ್ತುತ ಅರ್ಜಿ ಸಲ್ಲಿಸುವ ಕಾಲವಾಧಿ ಮುಗಿದಿದ್ದು, ಅರ್ಜಿ ಸಲ್ಲಿಸುವಾಗ ವೆಬ್ಸೈಟ್ ನಲ್ಲಿ ಒಟ್ಟು 4 ವಿವಿಧ ಹಂತಗಳಿದ್ದು, 4 ಹಂತಗಳನ್ನು ಪೂರ್ಣಗೊಳಿಸದೇ ಅಪೂರ್ಣ ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳಿಗೆ ದಿನಾಂಕ:- 08-01-2026 ರಿಂದ ದಿನಾಂಕ:-15-01-2026 ರವರೆಗೆ ಅರ್ಜಿಗಳನ್ನು ಪೂರ್ಣಗಳಿಸಲು ವೆಬ್ಸೈಟ್ನಲ್ಲಿ ಇಲಾಖಾ ವತಿಯಿಂದಲೇ ಅವಕಾಶ ನೀಡಿ ಆದೇಶಸಲಾಗಿರುತ್ತದೆ,

ಆದ್ದರಿಂದ ಅಪೂರ್ಣ ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳಿಗೆ ಅರ್ಜಿಗಳನ್ನು ಪೂರ್ಣಗೊಳಿಸಲು ದಿ.-08- ರಿಂದ -15 ವರೆಗೆ ಸಂಜೆ 5:30 ರವರೆಗೆ ಕಾಲಾವಕಾಶ ನಿಗದಿಪಡಿಸಿದೆ,

ಅಭ್ಯರ್ಥಿಗಳು ಅರ್ಜಿಯನ್ನು 4 ಹಂತಗಳಲ್ಲಿ ಪೂರ್ಣಗೊಳಿಸಬೇಕಾಗಿರುತ್ತದೆ ಒಂದನೇ ಹಂತ:- ಆನ್ಲೈನ್ ತಂತ್ರಾಂಶದಲ್ಲಿ ನಿಗದಿತ ಅರ್ಜಿ ನಮೂನೆಯಲ್ಲಿ ಮಾಹಿತಿ ತುಂಬುವುದು. ಎರಡನೇ ಹಂತ:- ತಮ್ಮ ಭಾವಚಿತ್ರ ಸಹಿಯನ್ನು ಅಪ್ ಲೋಡ್ ಮಾಡುವುದು. ಮೂರನೇ ಹಂತ:- ತಮ್ಮ ದಾಖಲಾತಿಗಳನ್ನು ಅಪ್ ಲೋಡ್ ಮಾಡುವುದು. ನಾಲ್ಕನೇ ಹಂತ:- ತದ್ದು ಆಧಾರ ಸಂಖ್ಯೆ ನಮೂದಿಸಿ, ಇ-ಹಸ್ತಾಕ್ಷರದೊಂದಿಗೆ ಅರ್ಜಿಯನ್ನು ಪೂರ್ಣಗೊಳಿಸುವುದು.

ಹೆಚ್ಚಿನ ಮಾಹಿತಿಗಾಗಿ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿಗೆ ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದಾಗಿದೆ ಎಂದು ಸಿಡಿಪಿಓ ಗೋಕುಲ ಸಾಬ ತಿಳಿಸಿದ್ದಾರೆ.



ದೀರ್ಘಾವಧಿ ಸಿಎಂಗೆ ಅಭಿನಂದಿಸಿದ ರಾಯಚೂರು ಕಾಂಗ್ರೆಸ್ ಮುಖಂಡರು

ರಾಯಚೂರು,ಜ.08-

ದೀರ್ಘಾವಧಿಯಾಗಿ ಮುಖ್ಯಮಂತ್ರಿಯಾಗಿ ರಾಜ್ಯದ ಸೇವೆ ಸಲ್ಲಿಸಿದ ಸಿದ್ದರಾಯ್ಯನವರನ್ನು ಬೆಂಗಳೂರಿನಲ್ಲಿ ರಾಯಚೂರು ಕಾಂಗ್ರೆಸ್ ಮುಖಂಡರು ಭೇಟಿಯಾಗಿ ಅಭಿನಂದನೆ ಸಲ್ಲಿಸಿದರು.

ಈ ಸಂದರ್ಭದಲ್ಲಿ ಶಾಸಕರು ಗ್ರಾಮೀಣ ಶಾಸಕ ಬಸನಗೌಡ ದದ್ದಲ, ವಿಧಾನ ಪರಿಷತ್ ಸದಸ್ಯರಾದ ಎ.ವಸಂತ ಕುಮಾರ, ಶಾಸಕರಾದ ಹಪನಗೌಡ ಬಾದರ್ಲಿ, ಎಂಎಲ್‌ಸಿ ಶರಣಗೌಡ ಬಯ್ಯಾಪುರ, ರಜಾಕ್ ಉಸ್ತಾದ್, ಪಾಗುಂಟಪ್ಪ ಮಿರ್ಜಾಪುರ ಅಧ್ಯಕ್ಷರು ಜಿಲ್ಲಾ ಉಪ್ಪಾರ ಸಮಾಜ ಸೇವಾ ಸಂಘ ರಾಯ ಚೂರು, ಪಾಮಯ್ಯ ಮುರಾರಿ, ಕೆ.ಅಸ್ಲಂ ಪಾಶಾ, ರಾಮು ಕೃಷ್ಣ ನಾಯಕ, ಶ್ರೀನಿವಾಸ ಶಿಂಧೆ ಉಪಸ್ಥಿತರಿದ್ದರು.

ಶಾಲೆ ಆವರಣದಲ್ಲಿ ಹಾಸ್ಟಲ್ ನಿರ್ಮಿಸದಂತೆ ಹಳೇ ವಿದ್ಯಾರ್ಥಿಗಳ ಒತ್ತಾಯ



ಸಿರವಾರ,ಜ.09-

ಹಿಂದುಳಿದ ವರ್ಗಗಳ ಇಲಾಖೆಯಿಂದ ಮೆಟ್ರಿಕ್ ನಂತರ ಹಾಸ್ಟೆಲ್ ಕಟ್ಟಡವನ್ನು ಸರಕಾರಿ ಪದವಿ ಪೂರ್ವ ಕಾಲೇಜಿನ ಆವರಣದಲ್ಲಿ ನಿರ್ಮಿಸದೆ ಬೇರೆ ಕಡೆ ನಿರ್ಮಿ ಸಬೇಕು ಎಂದು ಒತ್ತಾಯಿಸಿ ಹಳೇ ವಿದ್ಯಾರ್ಥಿಗಳು ತಹಸೀಲ್ದಾರರಿಗೆ ಮನವಿ ಪತ್ರ ನೀಡುವ ಮೂಲಕ ಒತ್ತಾಯಿಸಿದ್ದರು. ಸಿರವಾರ ಪಟ್ಟಣದ ಸರ್ವೆ ನಂಬರ್ 13 ವಿಸ್ತೀರ್ಣ 04 ಎಕರೆ 23 ಗುಂಟೆ ಈ ಭೂಮಿಯನ್ನು ಸರ್ಕಾರಿ ಪದವಿ ಪೂರ್ವ ಕಾಲೇಜಿಗೆ ಮಕ್ಕಳ ಶೈಕ್ಷಣಿಕ ಹಿತದೃಷ್ಟಿಯಿಂದ ದಾನವಾಗಿ ನೀಡಿದ್ದು ಇರುತ್ತದೆ.

ಪ್ರಸ್ತುತ ಈ ಪದವಿ ಪೂರ್ವ ಕಾಲೇಜು ವ್ಯಾಪ್ತಿಯ ಆವರಣದಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯವು ಮಂಜೂರಾಗಿದ್ದು ಇದನ್ನು ಬೇರೆಡೆ ಸ್ಥಳಾಂತರಿಸಲು ಮನವಿ ಮಾಡಿದ್ದಾರೆ. ಕಾರಣ ಮಕ್ಕಳ ಶೈಕ್ಷಣಿಕ ಹಿತದೃಷ್ಟಿ ಮತ್ತು ಈ ಸ್ಥಳದಲ್ಲಿ ಮಕ್ಕಳ ಕ್ರೀಡಾಕೂಟಗಳು ಸೇರಿದಂತೆ ಇನ್ನಿತರೇ ಚಟುವಟಿಕೆಗಳಿಗೆ ಅನುಕೂಲವಾಗಿದ್ದರಿಂದ ಮಂಜೂರಾದ ವಸತಿ ನಿಲಯವನ್ನು ಬೇರೆಡೆ ಸ್ಥಳಾಂತರಿಸಲು ಮನವಿ ಮಾಡಿದ್ದಾರೆ.

ಅದರ ಜೊತೆಗೆ ಭೂಧಾನಿಗಳ ಕುಟುಂಬಸ್ಥರಾಸ ಮಲ್ಲಿಕಾರ್ಜುನ ಗೌಡ ಪಟೇಲ್ (ಎಂ.ಬಿ ಪಟೇಲ್) ಸಹ ವಿರೋದವಿದೆ. ಈ ಸಂದರ್ಭದಲ್ಲಿ ಹಳೆ ವಿದ್ಯಾರ್ಥಿಗಳಾದ ಟಿ.ಬಸವರಾಜ, ಅಯ್ಯನಗೌಡ

3ನೇ ಪುಟಕ್ಕೆ

ಫಲಾನುಭವಿಗಳ ಪಟ್ಟಿಯಲ್ಲಿ ಅನರ್ಹರು:ಬಸನಗೌಡ ಬಾದರ್ಲಿ ವಿರುದ್ಧ ಟೀಕೆ



ಸಿಂಧನೂರು,ಜ.09-

ಬಸನಗೌಡ ಬಾದರ್ಲಿ ಕಳುಹಿಸಿದ ಪಟ್ಟಿಯಲ್ಲಿ ಅನರ್ಹರಿದ್ದಾರೆ. ಬಿಜೆಪಿ, ಜೆಡಿಎಸ್ನವರಿದ್ದಾರೆ. ಇದಕ್ಕಾಗಿ ಶಾಸಕ ಹಂಪನಗೌಡ ಬಾದರ್ಲಿ ರದ್ದತಿಗೆ ಪತ್ರ ಬರೆದಿದ್ದಾರೆ. ಇದರಲ್ಲಿ ಬಸನಗೌಡ ಬಾದರ್ಲಿ ರಾಜಕಾರಣ ಮಾಡುತ್ತಾ, ಹಂಪನಗೌಡರನ್ನು ಪರಿಶಿಷ್ಟ ವಿರೋಧಿ ಎಂದು ಬಿಂಬಿಸುವದು ಅವರ ಸಣ್ಣತನ ತೋರಿಸುತ್ತದೆ ಎಂದು ಭೋವಿ ಸಮಾಜ ಅಧ್ಯಕ್ಷ ಅಶೋಕ ಉಮಲೂಟಿ ಟೀಕಿಸಿದರು.

ಅವರು ನಗರದ ಪತ್ರಿಕಾ ಭವನದಲ್ಲಿ ಗುರುವಾರ ಪರಿಶಿಷ್ಟ ನಾಯಕರೊಂದಿಗೆ ಸುದ್ದಿಗೋಷ್ಟಿ ನಡೆಸಿ ಮಾತನಾಡಿದರು. ಸಿಂಧನೂರು ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಜನರಿಂದ ಆಯ್ಕೆಯಾದ ಶಾಸಕರು ಕಳುಹಿಸಿದ ಫಲಾನುಭವಿಗಳ ಪಟ್ಟಿಗೆ ಸರಕಾರ ಆದ್ಯತೆ ನೀಡುತ್ತದೆ. ಬಸನಗೌಡ ಬಾದರ್ಲಿ ಕಳುಹಿಸಿದ ಪಟ್ಟಿಯಲ್ಲಿ ಅನರ್ಹರಿದ್ದಾರೆ ಎಂದರು.

ಮಾದಿಗ ಸಮಾಜದ ಅಧ್ಯಕ್ಷ ಮರಿಯಪ್ಪ ಮಾತನಾಡಿ, ಶಾಸಕ ಹಂಪನಗೌಡ ಬಾದರ್ಲಿ ಸುಮಾರು 50 ವರ್ಷಗಳಿಂದ ರಾಜಕೀಯ ಮಾಡುತ್ತಿದ್ದಾರೆ. ಪರಿಶಿಷ್ಟರು, ಅಲ್ಪಸಂಖ್ಯಾತರು, ಹಿಂದುಳಿದವರು ಅವರ ಹಿಂದೆ ಇದ್ದಾರೆ. ಎಲ್ಲರನ್ನು ಸಮಾನವಾಗಿ ಕಂಡು ವಿಶ್ವಾಸಕ್ಕೆ ತೆಗೆದುಕೊಳ್ಳುತ್ತಾರೆ. ಮಾದಿಗ ಸಮಾಜಕ್ಕೆ ಒಂದು ಎಕರೆ ಭೂಮಿ ಕೊಡಿಸಿದ್ದಾರೆ. ಭವನ ನಿರ್ಮಾಣಕ್ಕೆ ಅನುದಾನ ನೀಡಿದ್ದಾರೆ. ಎಂಎಲ್ಸಿ ಆರೋಪ ಸತ್ಯಕ್ಕೆ ದೂರವಾಗಿದೆ. ಬಸನಗೌಡ ಬಾದರ್ಲಿ ಪಕ್ಷದಲ್ಲಿ ಗುಂಪುಗಾರಿಕೆ ಮಾಡಿ ಗೊಂದಲ ಸೃಷ್ಠಿ ಮಾಡುತ್ತಿದ್ದಾರೆ ಎಂದರು.

ವಾಲ್ಮೀಕಿ ನಾಯಕ ಸಮಾಜದ ಅಧ್ಯಕ್ಷ ಅರುಣಕುಮಾರ ಮಾತನಾಡಿ, ಹಿಂದೆ ರಾಗಲಪರ್ವಿ ಜಿ.ಪಂ. ವ್ಯಾಪ್ತಿಯಲ್ಲಿ ತಾ.ಪಂ.ಚುನಾವಣೆಯಲ್ಲಿ ಸಾಮಾನ್ಯಕ್ಕೆ ಮೀಸಲಾಗಿದ್ದರೂ ಎಸ್ಟಿ ಜನಾಂಗಕ್ಕೆ ಟಿಕೆಟ್ ನೀಡಿದ್ದು ಹಂಪನಗೌಡ ಬಾದರ್ಲಿ. ಅದರ ಫಲಾನುಭವಿ ವೆಂಕಟೇಶ ರಾಗಲಪರ್ವಿ. ಅವರ ಪತ್ನಿಯನ್ನು ತಾ.ಪಂ.ಅಧ್ಯಕ್ಷೆಯನ್ನಾಗಿ ಮಾಡಿದ್ದು ಹಂಪನಗೌಡರು. ಎಲ್ಲವನ್ನು ಅನುಭವಿಸಿ ಈಗ ಅವರ ಬಗ್ಗೆಯೇ

3ನೇ ಪುಟಕ್ಕೆ

ಜ.20 ಪಟ್ಟಣ ಪಂಚಾಯತಿ ಅಧ್ಯಕ್ಷ ಸ್ಥಾನ ಮುಹೂರ್ತ: ಸಾಮಾನ್ಯ ಸ್ಥಾನಕ್ಕೆ 4 ಆಕಾಂಕ್ಷಿಗಳು



ಸಿರವಾರ,ಜ.09-

ಸ್ಥಳೀಯ ಪಟ್ಟಣ ಪಂಚಾಯತಿಯ ತೆರವಾದ ಅಧ್ಯಕ್ಷ ಸ್ಥಾನಕ್ಕೆ ಚುನಾವಣೆಗೆ ಮುಹೂರ್ತ ಜನವರಿ ,20 ಮಂಗಳವಾರ ನಿಗದಿಯಾಗಿದ್ದೂ, ಅಧ್ಯಕ್ಷ ಸ್ಥಾನವು ಸಾಮಾನ್ಯ ಮಿಸಲು ಇರಯವದರಿಂದ 4 ಜನ ಆಕಾಂಕ್ಷಿಗಳು ಇದ್ದಾರೆ. ಬಿಜೆಪಿ-ಜೆಡಿಎಸ್ ನಡೆ ನಿಗೂಢವಾಗಿದೆ. ಸಿರವಾರ ಪಟ್ಟಣ ಪಂಚಾಯತಿ ಅಧ್ಯಕ್ಷ ರಾಗಿ ವೈ.ಭೂಪನಗೌಡ ಅವರು ಡಿ. 18 ರಂದು ವಯಕ್ತಿಕ ಕಾರಣದಿಂದ ರಾಜೀನಾಮೆ ನೀಡಿದರು. ಆ ರಾಜಿನಾಮೆಯು ಡಿ. 31 ರಂದು ಅಂಗಿಕಾರವಾಗಿತು. ಇದರಿಂದಾಗಿ ಅಧ್ಯಕ್ಷ ಸ್ಥಾನವು ಖಾಲಿ ಉಳಿಯುವಂತಾಗಿತು. ಅದರನ್ವಯ ಜನವರಿ 20 ಮಂಗಳವಾರ ಬೆಳಗ್ಗೆ 9 ಗಂಟೆಯಿಂದ 11 ನಾಮಪತ್ರ ಸಲ್ಲಿಕೆಗೆ ಅವಕಾಶ, 11 ಗಂಟೆಯಿಂದ 1 ಗಂಟೆಯ ವರೆಗೂ ನಾಮಪತ್ರ ಪರಿಶೀಲನೆ, 1:15 ಕೆ ನಾಮಪತ್ರ ಹಿಂಪಡೆಯಲು ಅವಕಾಶ, ಅಗತ್ಯ ಬಿದ್ದರೆ 1:30 ಕ್ಕೆ ಚುನಾವಣೆ ಮೂಲಕ ಅಧ್ಯಕ್ಷರ ಆಯ್ಕೆ ಮಾಡಲಾಗುವುದು ಎಂದು ತಹಶಿಲ್ದಾರರ ಹಾಗೂ ಚುನಾವಣೆ ಅಧಿಕಾರಿಯಾಗಿರುವ ಅಶೋಕಪವಾರ ತಿಳಿಸಿದ್ದಾರೆ.

ಬಲಾ ಬಲ :- ಪಟ್ಟಣ ಪಂಚಾಯತಿ ಅಧ್ಯಕ್ಷರ ಸ್ಥಾನ ಸಾಮಾನ್ಯ ವರ್ಗಕ್ಕೆ ಮೀಸಲಾಗಿದೆ. ಒಟ್ಟು 20 ಜನ ಸದಸ್ಯರಲ್ಲಿ 9 ಕಾಂಗ್ರೇಸ್, 6 ಬಿಜೆಪಿ, ಜೆಡಿಎಸ್ 3, 2 ಪಕ್ಷೇತರ ಗೆಲುವು ಸಾದಿಸಿದ್ದಾರೆ. ಬಹುಮತಕ್ಕೆ 11 ಸದಸ್ಯರ ಬಲ ಬೇಕು. ಕಳೆದ ಬಾರಿ ಎರಡು ಪಕ್ಷೇತರ ಸದಸ್ಯರು ಬಿಜೆಪಿ ಪಕ್ಷದ ಅಭ್ಯರ್ಥಿ ಪರ ಮತದಾನ ಮಾಡಿದ ಕಾರಣ ಸಮಬಲ ಬಂದಿರುವ ಕಾರಣ ಕೊನೆಗೆ ಚೀಟಿ ಎತ್ತುವ ಮೂಲಕ ಅದ್ಯಕ್ಷರ ಆಯ್ಕೆ ಜರುಗಿತು. ಒಬ್ಬ ಸಂಸದರು ಹಾಗೂ ಒಬ್ಬ ಶಾಸಕರು ಮತದಾನದ ಹಕ್ಕನ್ನು ಹೊಂದಿರುತ್ತಾರೆ.

ಅಧ್ಯಕ್ಷರ ಸ್ಥಾನ ಸಾಮಾನ್ಯ ಇರುವ ಕಾರಣ ಆಕಾಂಕ್ಷಿಗಳ ಸಂಖ್ಯೆ ಹೆಚ್ಚಾಗಿ, 15 ತಿಂಗಳು ಕಾಲ ಒಳ ಒಪ್ಪಂದ ಮಾಡಿಕೊಳ್ಳಲಾಗಿತ್ತು ಎಂದು ಹೇಳಲಾಗಿತು. 4 ಜನ

3ನೇ ಪುಟಕ್ಕೆ

ಮುಂದುವರೆದ ಶಾಸಕ ಪ್ರಭು ಚವ್ಹಾಣ ಗ್ರಾಮ ಸಂಚಾರ

ಸರ್ಕಾರಿ ಶಾಲೆಗಳಲ್ಲಿ ಮಕ್ಕಳ ದಾಖಲಾತಿ ಹೆಚ್ಚಿಸಲು ಸೂಚನೆ



ಔರಾದ್,ಜ.09-

ಎಲ್ಲ ಸರ್ಕಾರಿ ಶಾಲೆಗಳಿಗೆ ಒಳ್ಳೆಯ ಕಟ್ಟಡ ಮತ್ತು ಎಲ್ಲ ಮೂಲ ಸೌಕರ್ಯಗಳನ್ನು ಒದಗಿಸಿ ಗುಣಮಟ್ಟದ ಶಿಕ್ಷಣ ಕಲ್ಪಿಸಲು ಪ್ರಯತ್ನಿಸುತ್ತಿದ್ದು, ಸರ್ಕಾರಿ ಶಾಲೆಗಳಲ್ಲಿ ಮಕ್ಕಳ ದಾಖಲಾತಿಯನ್ನು ಹೆಚ್ಚಿಸಲು ಶಾಲೆಯ ಶಿಕ್ಷಕರು ಮತ್ತು ಇಲಾಖೆಯ ಅಧಿಕಾರಿಗಳು ಶ್ರಮಿಸಬೇಕೆಂದು ಮಾಜಿ ಸಚಿವರು ಹಾಗೂ ಔರಾದ(ಬಿ) ಶಾಸಕರಾದ ಪ್ರಭು ಬಿ.ಚವ್ಹಾಣ ಅವರು ಶಾಲೆಯ ಮುಖ್ಯಗುರುಗಳು ಮತ್ತು ಶಿಕ್ಷಣಾಧಿಕಾರಿಗಳಿಗೆ ಸೂಚಿಸಿದರು.

ಗ್ರಾಮ ಸಂಚಾರದ ನಿಮಿತ್ತ ಜ.8ರಂದು ವಡಗಾಂವ ಹೋಬಳಿ ವ್ಯಾಪ್ತಿಯ ಖಾಶೆಂಪೂರ(ಬಿ), ಜಂಬಗಿ, ಮಹಾರಾಜವಾಡಿ, ಸೋರಳ್ಳಿ ಸೇರಿದಂತೆ ವಿವಿಧ ಶಾಲೆ ಮತ್ತು ಅಂಗನವಾಡಿ ಕೇಂದ್ರಗಳಿಗೆ ಭೇಟಿ ನೀಡಿ ವ್ಯವಸ್ಥೆಗಳನ್ನು ಪರಿಶೀಲಿಸಿದರು.

ಎಲ್ಲ ಶಿಕ್ಷಕರು ಪ್ರತಿದಿನ ಬರುತ್ತಾರಾ ? ಎಲ್ಲ ತರಗತಿಗಳು ಸರಿಯಾಗಿ ನಡೆಯುತ್ತವೆಯೇ ? ಎಲ್ಲರೂ ಸರಿಯಾಗಿ ಪಾಠ ಮಾಡುತ್ತಾರಾ ? ಶಾಲೆಯಲ್ಲಿ ಕುಡಿಯುವ ನೀರು, ಶೌಚಾಲಯ, ಆಟದ ಮೈದಾನ, ಮಧ್ಯಾಹ್ನದ ಬಿಸಿಯೂಟ ಸರಿಯಾಗಿ ಮಾಡುತ್ತಿದ್ದಾರಾ ? ಎಂದು ಮಕ್ಕಳಿಗೆ ವಿವಿಧ ಪ್ರಶ್ನೆಗಳನ್ನು ಕೇಳಿ ಸರ್ಕಾರಿ ಶಾಲೆಗಳ ಸೌಲಭ್ಯಗಳ ಬಗ್ಗೆ ಮಾಹಿತಿ ಪಡೆದರು.

ಖಾಶೆಂಪೂರ ಹಾಗೂ ಕೆಲವೊಂದು ಶಾಲೆ ಮತ್ತು ಅಂಗನವಾಡಿ ಕೇಂದ್ರಗಳಲ್ಲಿ ಮಕ್ಕಳ ಸಂಖ್ಯೆ ಕಡಿಮೆಯಿರುವುದನ್ನು ಗಮನಿಸಿ, ಮುಖ್ಯಗುರುಗಳಿಂದ ವಿವರಣೆ ಪಡೆದರು. ಮಕ್ಕಳ ಸಂಖ್ಯೆ ಕಡಿಮೆಯಿರುವ ಶಾಲೆಗಳನ್ನು ರಾಜ್ಯ ಸರ್ಕಾರ ಮುಚ್ಚಲು ಹೊರಟಿದೆ. ಶಾಲೆ ಮುಚ್ಚಿದರೆ ವಿದ್ಯಾರ್ಥಿಗಳ ಜೊತೆಗೆ ಶಿಕ್ಷಕರಿಗೂ ತೊಂದರೆಯಾಗುತ್ತದೆ. ಹಾಗಾಗಿ ಎಲ್ಲ ಶಾಲೆಗಳಲ್ಲಿ ಕಡ್ಡಾಯವಾಗಿ ಮಕ್ಕಳ ದಾಖಲಾತಿ ಹೆಚ್ಚಿಸಬೇಕು. ಇದಕ್ಕಾಗಿ ಶಿಕ್ಷಕರು ಗ್ರಾಮದ ಪ್ರತಿ ಮನೆಗೆ ಭೇಟಿ ನೀಡಿ ಪೋಷಕರ ಮನವೊಲಿಸುವ ಕೆಲಸ ಮಾಡಬೇಕೆಂದು ಹೇಳಿದರು.

ಸರ್ಕಾರಿ ಶಾಲೆಗಳಿಗೆ ಉತ್ತಮ ಕಟ್ಟಡಗಳು, ಮೂಲಸೌಕರ್ಯ, ಸ್ಮಾರ್ಟ್ ತರಗತಿಗಳು, ಉಚಿತ ಪಠ್ಯಪುಸ್ತಕ, ಸಮವಸ್ತ್ರ, ಮಧ್ಯಾಹ್ನದ ಬಿಸಿಯೂಟ, ವಿದ್ಯಾರ್ಥಿವೇತನ ಸೇರಿದಂತೆ ಹಲವು ಯೋಜನೆಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲಾಗುತ್ತಿದೆ. ಬಡ ಮತ್ತು ಮಧ್ಯಮ ವರ್ಗದವರು ಖಾಸಗಿ ಶಾಲೆಗಳಿಗೆ ಲಕ್ಷಾಂತರ ಖರ್ಚು ಮಾಡುವ ಬದಲು ತಮ್ಮ ಮಕ್ಕಳನ್ನು ಸರ್ಕಾರಿ ಶಾಲೆಗೆ ದಾಖಲಿಸಬೇಕೆಂದು ಮನವಿ ಮಾಡಿದರು.

ಶಿಕ್ಷಣದ ಅಭಿವೃದ್ಧಿ ನನ್ನ ಮೊದಲನೇ ಆದ್ಯತೆಯಾಗಿದ್ದು, ಶಾಲೆ ಕಾಲೇಜುಗಳ ಅಭಿವೃದ್ಧಿಗೆ ಬೇಕಾದಷ್ಟು ಅನುದಾನ ಕೊಡಲು ಸಿದ್ಧನಿದ್ದೇನೆ.

ಶಾಲೆ, ಕಾಲೇಜು ಮತ್ತು ಅಂಗನವಾಡಿ ಕೇಂದ್ರಗಳಲ್ಲಿ ಏನಾದರೂ ಕೊರತೆಯಿದ್ದರೆ ನನಗೆ ಕೇಳಿ, ಎಲ್ಲವನ್ನು ಒದಗಿಸುತ್ತೇನೆ. ಆದರೆ ಸರ್ಕಾರಿ ಶಾಲೆಗಳಲ್ಲಿ ಮಕ್ಕಳ ದಾಖಲಾತಿ ಹೆಚ್ಚಳಕ್ಕೆ ಪ್ರಯತ್ನಿಸಿ ಎಂದು ಮನವಿ ಮಾಡಿದರು.

ಖಾಶೆಂಪೂರ, ವಡಗಾಂವ, ಜಂಬಗಿ, ಮಹಾರಾಜವಾಡಿ, ವಲ್ಲೇಪೂರ, ಸೋರಳ್ಳಿ,

ಕಂದಗೂಳ ಹಾಗೂ ಖಾನಾಪೂರನಲ್ಲಿ ಗ್ರಾಮ ಸಂಚಾರ ನಡೆಸಿ ಸಾರ್ವಜನಿಕರ ಅಹವಾಲುಗಳನ್ನು ಆಲಿಸಿ ವಿವಿಧ ಸಮಸ್ಯೆಗಳಿಗೆ ಸ್ಥಳದಲ್ಲೇ ಪರಿಹಾರ ಕಲ್ಪಿಸಿದರು. ಇದೇ ವೇಳೆ ಗ್ರಾಮಸ್ಥರು, ಸಿಸಿ ರಸ್ತೆ, ಚರಂಡಿ,

ಸಮುದಾಯ ಭವನ, ಮಂದಿರಗಳ ಜೀರ್ಣೋದ್ಧಾರ, ಶಾಲೆಗಳಲ್ಲಿ ಹೆಚ್ಚುವರಿ ತರಗತಿ ಕೋಣೆಗಳ ನಿರ್ಮಾಣ, ಸ್ಮಶಾನ ಭೂಮಿ ಸಮಸ್ಯೆ, ಫಾರ್ಮೇಶನ್ ರಸ್ತೆ, ಹೊಸ ಓಣಿಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸುವುದು ಸೇರಿದಂತೆ ನಾನಾ ಸಮಸ್ಯೆಗಳ ಬಗ್ಗೆ ಶಾಸಕರ ಗಮನಕ್ಕೆ ತಂದರು.

ಎಲ್ಲ ಬೇಡಿಕೆಗಳನ್ನು ಆದ್ಯತೆಗೆ ಅನುಗುಣ ಈಡೇರಿಸುವುದಾಗಿ ಶಾಸಕರು ಭರವಸೆ ನೀಡಿದರು. ಈ ಸಂದರ್ಭದಲ್ಲಿ ಸಿಸಿ ರಸ್ತೆ, ಶಾಲೆ ಉನ್ನತೀಕರಣ ಕಾಮಗಾರಿ, ಹೈಮಾಸ್ಟ್ ವಿದ್ಯುತ್ ದೀಪ ಸೇರಿದಂತೆ ವಿವಿಧ ಕಾಮಗಾರಿಗಳಿಗೆ ಭೂಮಿ ಪೂಜೆ ನೆರವೇರಿಸಿದರು.



ವಿಶ್ರೀಕೃವಿವಿಯ ರೆಡ್‌ಕ್ರಾಸ್ ಘಟಕದ ಕಾರ್ಯಕ್ರಮಾಽಕಾರಿಗಳಿಗೆ ಕಾರ್ಯಾಗಾರ

ರಕ್ತದಾನದ ಮೂಲಕ ಪ್ರಾಣ ಉಳಿಸಲು ಮುಂದಾಗಿ: ಪ್ರೊ.ಮುನಿರಾಜು

ಬಳ್ಳಾರಿ,ಜ.09-

ರಕ್ತದಾನ ಶಿಬಿರವನ್ನು ಆಯೋಜಿಸುವ ಮೂಲಕ ಜೀವವನ್ನು ಉಳಿಸುವ ಕೆಲಸ ಯುವರೆಡ್ ಕ್ರಾಸ್ ಮಾಡುತ್ತಿದೆ ಎಂದು ವಿಜಯನಗರ ಶ್ರೀಕೃಷ್ಣದೇವರಯ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಎಂ ಮುನಿರಾಜು ಅವರು ಹೇಳಿದರು.

ಬುಧವಾರ ವಿಶ್ವವಿದ್ಯಾಲಯದ ಡಾ.ಬಿ.ಆರ್ ಅಂಬೇಡ್ಕರ್ ಸಭಾಂಗಣದಲ್ಲಿ ಬಳ್ಳಾರಿ ಯುವ ರೆಡ್ ಕ್ರಾಸ್ ಘಟಕ ಹಾಗೂ ವಿಶ್ವವಿದ್ಯಾಲಯದ ಅಧೀನದಲ್ಲಿ ಬರುವ ಮಹಾವಿದ್ಯಾಲಯಗಳ ರೆಡ್‌ಕ್ರಾಸ್ ಘಟಕದ ಕಾರ್ಯಕ್ರಮಾಧಿಕಾರಿಗಳಿಗೆ ಆಯೋಜಿಸಿದ್ದ ಒಂದು ದಿನದ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು.

ವಿದ್ಯಾರ್ಥಿಗಳು ರಕ್ತದಾನ ಮಾಡುವುದರಿಂದ ವಿಶ್ವವಿದ್ಯಾಲಯದ ಕೀರ್ತಿ ಹೆಚ್ಚಾಗುತ್ತದೆ. ಒಬ್ಬ ವ್ಯಕ್ತಿ ಮೂರು ತಿಂಗಳಿಗೊಮ್ಮೆ ರಕ್ತದಾನ ಮಾಡಬಹುದಾಗಿದೆ. ಯುವಕರು ರಕ್ತದಾನ ಮಾಡಲು ಮುಂದಾಗಬೇಕು. ರಕ್ತದಾನದ ಮಾಡುವುದರಿಂದ ಆರೋಗ್ಯಕ್ಕೆ ಹಲವಾರು ಪ್ರಯೋಜನಗಳಿವೆ. ಯುವ ಜನತೆ ಸ್ವಯಂ ಪ್ರೇರಿತರಾಗಿ ರಕ್ತದಾನ ಮಾಡಿರಿ.

ವಿವಿಯ ವ್ಯಾಪ್ತಿ ಯಲ್ಲಿ ಬರುವ ಕಾಲೇಜುಗಳಲ್ಲಿ ಹೆಚ್ಚು ರಕ್ತದಾನ ಮಾಡುವವರನ್ನು ವಿವಿಯ ವತಿಯಿಂದ ಅತ್ಯುತ್ತಮ ಗೌರವ ಪ್ರಶಸ್ತಿ ನೀಡುವುದಾಗಿ ಹೇಳಿದರು.

ರೆಡ್ ಕ್ರಾಸ್ ಸಂಸ್ಥೆಯ ಜಿಲ್ಲಾ ಕಾರ್ಯದರ್ಶಿ ಎಮ್.ಎ ಶಕೀಬ್ ಅವರು ಮಾತನಾಡಿ, ಕಾಲಕಾಲಕ್ಕೆ ರಕ್ತದಾನ ಮಾಡುವುದರಿಂದ ಆರೋಗ್ಯ ಸಮತೋಲನವಾಗಿರಲು ಸಹಾಯಕವಾಗುತ್ತದೆ ಎಂದರು.

ಬಳಿಕ ರೆಡ್ ಕ್ರಾಸ್ ಸಂಸ್ಥೆ ಬೆಳೆದು ಬಂದ ಹಾದಿ ಹಾಗೂ ಅದರ ಪ್ರಾಮುಖ್ಯತೆಯನ್ನು ತಿಳಿಸಿದರು.

ಈ ಸಂದರ್ಭದಲ್ಲಿ ವಿಶ್ವವಿದ್ಯಾಲಯದ ಅಧೀನದಲ್ಲಿ ಬರುವ ಮಹಾವಿದ್ಯಾಲಯಗಳ ರೆಡ್‌ಕ್ರಾಸ್ ಘಟಕದ 100ಕ್ಕು ಹೆಚ್ಚು ಕಾರ್ಯಕ್ರಮಾಧಿಕಾರಿಗಳು ಉಪಸ್ಥಿತರಿದ್ದರು.

ವಿವಿಯ ಯುವ ರೆಡ್ ಕ್ರಾಸ್ ನೋಡಲ್ ಅಧಿಕಾರಿ ಡಾ.ರಾಜೇಂದ್ರ ಪ್ರಸಾದ್ ಅವರು ಪ್ರಾಸ್ತಾವಿಕವಾಗಿ ಮಾತನಾಡಿ, ವಂದಿಸಿದರು. ಮೇಘರಾಜ ಅತಿಥಿಗಳನ್ನು ಸ್ವಾಗತಸಿ ದರು.

ಕಾರ್ಯಕ್ರಮದಲ್ಲಿ ವಿವಿಯ ವಿವಿಧ ನಿಕಾಯಗಳ ಡೀನರು, ವಿವಿಧ ವಿಭಾಗಗಳ ಮುಖ್ಯಸ್ಥರು, ಸಂಯೋಜಕರು, ಬೋಧಕರು, ಬೋಧಕೇತರ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳು ಹಾಜರಿದ್ದರು.

ಉತ್ತಮ ಆರೋಗ್ಯಕ್ಕಾಗಿ ಕುಸುಬೆ ಎಣ್ಣೆಕಾಳು ಬೆಳೆ: ಕೊಪ್ಪಳ ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರದಿಂದ ಪ್ರಾತ್ಯಕ್ಷಿಕೆ



ಕೊಪ್ಪಳ ,ಜ.09-

ಉತ್ತಮ ಆರೋಗ್ಯಕ್ಕಾಗಿ ಕುಸುಬೆ ಎಣ್ಣೆಕಾಳು ಬೆಳೆಯಾಗಿದ್ದು, ಕೊಪ್ಪಳ ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರದಿಂದ ಪ್ರಾತ್ಯಕ್ಷಿಕೆಗಳ ಮೂಲಕ ರೈತರಿಗೆ ಅರಿವು ಮೂಡಿಸಲಾಗಿದೆ.

ಕುಸುಬೆ ನಮ್ಮ ರಾಜ್ಯದ ಒಂದು ಪ್ರಮುಖ ಎಣ್ಣೆಕಾಳು ಬೆಳೆಯಾಗಿದೆ. ನೆಲಗಡಲೆ ಹಾಗೂ ಸೂರ್ಯಕಾಂತಿ ನಂತರ ಹಿಂಗಾರಿನಲ್ಲಿ ಬರುವ ಮುಖ್ಯ ಎಣ್ಣೆಕಾಳು ಬೆಳೆ ಎಂದರೆ ಕುಸುಬೆ. ಈ ಬೆಳೆಯನ್ನು ಉತ್ತರ ಕರ್ನಾಟಕ ಭಾಗದಲ್ಲಿ ಆಳವಾದ ಕಪ್ಪುಮಣ್ಣಿನಲ್ಲಿ ಬೆಳೆಯಲು ಸೂಕ್ತವಾಗಿದ್ದು, ಕಡಿಮೆ ಅವಧಿಯಲ್ಲಿ ಉತ್ತಮ ಆದಾಯ ಕೊಡುವ ಬೆಳೆ ಯಾಗಿದೆ.

ಗುಜರಾತ, ಮಹಾರಾಷ್ಟ್ರ, ಬಿಹಾರ ರಾಜ್ಯಗಳಲ್ಲಿ ಕರಾಡಿ ಎಂಬ ಹೆಸರಿನಲ್ಲಿ ಈ ಬೆಳೆ ಖ್ಯಾತಿ ಹೊಂದಿದೆ. ಸೂರ್ಯಕಾಂತಿ ಎಣ್ಣೆಕ್ಕಿಂತಲೂ ಆರೋಗ್ಯಕ್ಕೆ ಅದರಲ್ಲೂ, ಹೃದಯ ಸಂಬಂಧಿ ಆರೋಗ್ಯಕ್ಕೆ ಕುಸುಬೆ ಎಣ್ಣೆ ಅತ್ಯುತ್ತಮವಾಗಿದೆ. ಕುಸುಬೆ ಹಿಂಡಿಯುಕೂಡ ಜಾನುವಾರುಗಳಿಗೆ ಪ್ರಯೋಜನಕಾರಿಯಾಗಿದೆ. ಮಳೆ ಯ ಆಶ್ರಯದಲ್ಲಿ ಉತ್ತಮವಾಗಿ ಬರುವ ಈ ಬೆಳೆ ನೀರಾವರಿ ಇದ್ದಲ್ಲಿ ಉತ್ತಮ ನಿರ್ವಹಣೆಯೊಂದಿಗೆ ಹೆಚ್ಚಿನ ಲಾಭಕೊಡಬಲ್ಲದು. ಮಳೆ ಆಶ್ರಯದಲ್ಲಿ ಕಡಿಮೆ ಗೊಬ್ಬರಗಳ ಬಳಕೆಯಲ್ಲಿ, ಕಡಿಮೆ ಖರ್ಚಿನಲ್ಲಿ ಈ ಬೆಳೆಯನ್ನು ಬೆಳೆಯಬಹುದಾಗಿದೆ. ಕೊಪ್ಪಳ ಜಿಲ್ಲೆಯಾದ್ಯಂತ ಸುಮಾರು 3000 ಎಕರೆ ಪ್ರದೇಶದಲ್ಲಿ ಕುಸುಬೆಯನ್ನು ಬೆಳೆಯಲಾಗುತ್ತಿದ್ದು, ಕುಕನೂರು ತಾಲೂಕಿನಲ್ಲಿ ಸುಮಾರು 1000 ಎಕರೆಯಷ್ಟು ಪ್ರದೇಶದಲ್ಲಿ ಎರೆ ಭೂಮಿಯಲ್ಲಿ ಬೆಳೆಯಲಾಗುತ್ತಿದೆ. ಈ ನಿಟ್ಟಿನಲ್ಲಿ ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರ, ಕೊಪ್ಪಳದಿಂದ ಆಯ್ದ ರೈತರಿಗೆ ಕುಸುಬೆ ಬೆಳೆ (ತಳಿ :ಐ.ಎಸ್.ಎಫ್. 764) ಮುಂಚೂಣಿ ಪ್ರಾತ್ಯಕ್ಷಿಕೆಗಳನ್ನು ಎರೆಹಂಚಿನಾಳ ಹಾಗೂ ಮಾದಿನೂರು ಗ್ರಾಮಗಳಲ್ಲಿ ಹಮ್ಮಿಕೊಳ್ಳಾಗಿದ್ದು, ರೈತರಿಂದ ಉತ್ತಮ ಪ್ರತಿಕ್ರಿಯೆ ಬಂದಿರುತ್ತದೆ.

ಎಕರೆಗೆ ಬೀಜ ಪ್ರಮಾಣ 3 ರಿಂದ 4 ಕಿಲೋ ಗ್ರಾಂ. ಇದ್ದು, ಸೆಪ್ಟೆಂಬರ್ 15 ರಿಂದ ಅಕ್ಟೋಬರ್ 15ನೇ ತಾರೀಖಿನವರೆಗೂ ಬೀಜ ಬಿತ್ತನೆ ಮಾಡುವುದು ಸೂಕ್ತ. ಎಕರೆಗೆ 16 ಕೆ.ಜಿ. ಸಾರಜನಕ, 16 ಕೆ.ಜಿ. ರಂಜಕ ಹಾಗೂ 5 ಕೆ.ಜಿ. ಪೊಟ್ಯಾಶ್ ರಾಸಾಯನಿಕ ಗೊಬ್ಬರಗಳ ಜೊತೆಗೆ 10 ಕೆ.ಜಿ. ಗಂಧಕ ಮತ್ತು 6 ಕೇ.ಜಿ. ಎಷ್ಟು ಸತು ಒದಗಿಸಿದರೆ ಉತ್ತಮ ಫಸಲು ಪಡೆಯುವ ಸಾಧ್ಯತೆ ಇರುತ್ತದೆ. ಗಂಧಕವನ್ನು ಜಿಪ್ಸಂ ರೂಪದಲ್ಲಿ ಕಡಿಮೆ ಖರ್ಚಿನಲ್ಲಿ ಕೊಡಬಹುದಾಗಿದೆ. ಬೀಜೋಪಚಾರವಾಗಿ ಒಂದು ಎಕರೆ ಬಿತ್ತನೆ ಬೀಜಕ್ಕೆ 200 ಗ್ರಾಂ. ಅಜೋಸ್ಪಿರಿಲಂ ಬಳಸುವುದು ಸೂಕ್ತ. ಇದಕ್ಕೆ ಪೂರ್ವದಲ್ಲಿ ಬೀಜಗಳನ್ನು ಶೇಕಡ 2ರ ಕ್ಯಾಲ್ಸಿಯಂ ಕ್ಲೋರೈಡ್ ದ್ರಾವಣದಲ್ಲಿ 12 ಗಂಟೆಗಳ ಕಾಲ ನೆನೆಸಿ ಬಿತ್ತನೆ ಮಾಡುವುದು ಸೂಕ್ತ. ಸಾಲಿನಿಂದ ಸಾಲಿಗೆ 45 ಸೆಂಟಿಮೀಟರ್ ಮತ್ತು ಬೀಜದಿಂದ ಬೀಜಕ್ಕೆ 30 ಸೆಂಟಿ ಮೀಟರ್ ಅಂತರದಲ್ಲಿ ಜೋಡು ಸಾಲು ಮಾಡಿ ಬಿತ್ತುವುದು ಉತ್ತಮ. ತಳಿಗಳನ್ನು ಆಧರಿಸಿ 120 ರಿಂದ 130 ದಿನಗಳಲ್ಲಿ ಕಟಾವಿಗೆ ಬರುವ ಕುಸುಬೆ ಬೆಳೆ ಒಂದು ಲಾಭದಾಯಕ ಮಳೆಯಾಶ್ರಿತ ಬೆಳೆಯಾಗಿದೆ. ಎಕರೆಗೆ 3 ರಿಂದ 5 ಕ್ವಿಂಟಲ್ ಇಳುವರಿ ಪಡೆಯಬಹುದಾಗಿದ್ದು, ಸದ್ಯದ ಬೆಂಬಲ ಬೆಲೆ ಪ್ರತಿ ಕ್ವಿಂಟಾಲ್‌ಗೆ 8600 ರೂ. ಇರುತ್ತದೆ.

ಪ್ರಮುಖ ಕೀಟಗಳು: ಕರಿ ಹೇನು- ಇದರ ಹತೋಟಿಗಾಗಿ ಡೈಮೆಥೊಯೇಟ್ 30 ಈ.ಸಿ ಎನ್ನುವ ಕೀಟನಾಶಕವನ್ನು 1.7 ಮಿ.ಲಿ. ಪ್ರತಿ ಲೀಟರ್ ನೀರಿಗೆ ಬಳಸಿ ಸಿಂಪಡಿಸಬೇಕು. ಎಲೆ ತಿನ್ನುವ ಕೀಟ ಕಾಣಿಸಿದಲ್ಲಿ ಕ್ವಿನಾಲಾತ್‌ಸ್ 25 ಇ.ಸಿ. ಅಥವಾ ಇಮಾಮ್ಯಾಕ್ಟಿನ್ ಬೆಂ ಝೋಯೇಟ್ ಎನ್ನುವ ಕೀಟನಾ ಶಕವನ್ನು 0.40 ಗ್ರಾಂ. ಪ್ರತಿ ಲೀಟರ್ ನೀರಿಗೆ ಬೆರೆಸಿ ಸಿಂಪಡಿಸಬೇಕು.

ಪ್ರಮುಖ ರೋಗಗಳಾದ ಎಲೆ ಮಚ್ಚೆ ಮತ್ತು ಎಲೆ ಚುಕ್ಕಿ ರೋಗಗಳು ಕಂಡುಬಂದಲ್ಲಿ ಮ್ಯಾಂಕೋಜೆಮ್ 75 ಡಬ್ಲ್ಯೂ. ಪಿ. 2 ಗ್ರಾಂಅಥವಾ ಸಾಫ್ ಎನ್ನುವ ಸಂಯುಕ್ತ ಶಿಲೀಂದ್ರ ನಾಶಕವನ್ನು 2 ಗ್ರಾಂ ಪ್ರತಿ ಲೀಟರ್ ನೀರಿಗೆ ಬೆರೆಸಿ ಸಿಂಪಡಿಸಬೇಕು. ಹೆಚ್ಚಿನ ನಿರ್ವಹಣೆ ಇಲ್ಲದ ಈ ಬೆಳೆ ಬೇಸಿಗೆ ಹಂಗಾಮಿನಲ್ಲಿ, ಮಳೆ ಯಾಶ್ರಯದಲ್ಲಿ ಉತ್ತಮ ಲಾಭದಾಯಕ ಬೆಳೆಯಾಗಿದ್ದು, ರೈತರು ಹೆಚ್ಚಿನ ಮಾಹಿತಿಗಾಗಿ ಕೊಪ್ಪಳ ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರದ ವಿಜ್ಞಾನಿಗಳಾದ ವಿಸ್ತರಣಾ ಮುಂದಾಳು ಡಾ. ಎಂ. ವಿ.ರವಿ ಮೊ.ನಂ. 9480247745 ಮತ್ತು ಸಹಾಯಕ ಪ್ರಾಧ್ಯಾಪಕ ವಾಮನಮೂರ್ತಿ ಮೊ.ನಂ. 82176 96837, ಇವರನ್ನು ಸಂಪರ್ಕಿಸ ಬಹುದು.

ಅಂತರಿಕ್ಷ ಯಾನ ರಕ್ಷಣೆ ಕುರಿತು ವಿದ್ಯಾರ್ಥಿಗಳಿಗೆ ಕಾರ್ಯಾಗಾರ



ಸುರಪುರ,ಜ.09-

ಪಟ್ಟಣದ ಪತ್ರಿಕಾ ಭವನದಲ್ಲಿ ಶರಣಬಸವೇಶ್ವರ ವಿದ್ಯಾವರ್ಧಕ ಸಂಸ್ಥೆಯ ಅಕಾಡೆಮಿಕ್ ನಿರ್ದೇಶಕರು ಮತ್ತು ಶಿಕ್ಷಕರು ಸುದ್ದಿಗೋಷ್ಠಿ ನಡೆಸಿ ಏರೋ ಸ್ಪೇಸ್ ಮತ್ತು ಡಿಫೆನ್ಸ್ ಕುರಿತು ಹಮ್ಮಿಕೊಂಡಿರುವ ಕಾರ್ಯಾಗಾರದ ಮಾಹಿತಿ ನೀಡಿದರು.

ಈ ಸಂದರ್ಭದಲ್ಲಿ ಸಂಸ್ಥೆಯ ಅಕಾಡೆಮಿ ಡೈರೆಕ್ಟರ್ ಅನಿಲಕುಮಾರ ಪಾಟೀಲ್ ಮಾತನಾಡಿ ಜನವರಿ 10ರಂದು ಶನಿವಾರ ಬೆಳಗ್ಗೆ ಪಟ್ಟಣದ ವೀರಪ್ಪ ನಿಷ್ಠಿ ಇಂಜಿನಿಯರಿಂಗ್ ಕಾಲೇಜು ಬಳಿ ಪ್ರಪ್ರಥಮ ಬಾರಿಗೆ ಅಂತರಿಕ್ಷಯಾನ ಮತ್ತು ರಕ್ಷಣಾ ಕುರಿತು ವಿದ್ಯಾರ್ಥಿಗಳಿಗಾಗಿ ಅರಿವು ಮೂಡಿಸುವ ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗಿದೆ. ಶರಣಬಸವೇ ಶ್ವರ ವಿದ್ಯಾವರ್ಧಕ ಸಂಘದ ವೀರಪ್ಪ ನಿಷ್ಠಿ ತಾಂತ್ರಿಕ ಮಹಾವಿದ್ಯಾಲಯ, ಬಸವರಾಜಪ್ಪ ಅಪ್ಪ ಪದವಿ ವಾಣಿಜ್ಯ ಮಹಾವಿದ್ಯಾಲಯ, ಶರಣಬಸವ ಸ್ವತಂತ್ರ ಪದವಿ ಪೂರ್ವ ವಿಜ್ಞಾನ ಮತ್ತು ವಾಣಿಜ್ಯ ಮಹಾವಿದ್ಯಾಲಯ ಹಾಗೂ ಶರಣಬಸವ ವಸತಿ ಹಿರಿಯ ಪ್ರಾಥಮಿಕ ಮತ್ತು ಪ್ರೌಢಶಾಲೆ ಹಸನಾಪುರ ಇವರುಗಳ ಸಯುಕ್ತ ಆಶ್ರಯದಲ್ಲಿ ವೀರಪ್ಪ ನಿಷ್ಠಿ ತಾಂತ್ರಿಕ ಮಹಾವಿದ್ಯಾಲಯದ ಬಳಿಯಲ್ಲಿ ಜನವರಿ 10ರಂದು ಬೆಳಿಗ್ಗೆ ಸ್ವದೇಶಿ ವೈಮಾನಿಕ ಮತ್ತು ರಕ್ಷಣಾ ಜಾಗೃತಿ ಅಭಿಯಾನ, ಸ್ವದೇಶಿ ವಿಮಾನ ಮತ್ತು ಬಾಹ್ಯಾಕಾಶ ನೌಕೆಗಳ ಸೂಕ್ಷ್ಮ ವಿವರಗಳ ಪ್ರದರ್ಶನವನ್ನು ಈ ಸಂದರ್ಭದಲ್ಲಿ ಹಮ್ಮಿಕೊಳ್ಳಲಾಗಿದೆ.

ಈ ಕಾರ್ಯಾಗಾರದ ಮೂಲಕ ರಾಷ್ಟ್ರೀಯ ಹೆಮ್ಮೆಯ ಯೋಜನೆಗಳ ಬಗ್ಗೆ ವಿಶೇಷ ಭಾಷಣ, ವಿಮಾನ ಪ್ರದರ್ಶನ ಚಟುವಟಿಕೆಗಳು, ವಿದ್ಯಾರ್ಥಿಗಳಿಗೆ ಸಂವಾದಾತ್ಮಕ ಸಭೆ ಮತ್ತು ಪುಷ್ಪಕ ವಿಮಾನದಿಂದ ತೇಜಸ್ ಆರ್ಯಭಟ ದಿಂದ ಚಂದ್ರಯಾನ-3 ಮತ್ತು ಗಗನಯಾನದವರೆಗೆ ಭಾರ ತದ ವೈಮಾನಿಕ ಮತ್ತು ಬಾಹ್ಯಾಕಾಶ ಪಯಣವನ್ನು ಎತ್ತಿ ತೋರಿಸುವ ಪ್ರದರ್ಶನವನ್ನು ಒಳಗೊಂಡಿದ್ದು, ವೈಮಾನಿಕ,ರಕ್ಷಣಾ ಕ್ಷೇತ್ರಗಳಲ್ಲಿ ವೃತ್ತಿ ಮಾರ್ಗದರ್ಶನವನ್ನು ಕೂಡ ನೀಡಲಾಗುವುದು ಎಂದು ತಿಳಿಸಿದರು.

ಕಾರ್ಯಾಗಾರದಲ್ಲಿ ಪ್ರದೀಪ್ ಎಲ್ ಸಾವರ್ಕರ್ ಅವರು ಎಲ್ಲದರ ಮಾಹಿತಿಯನ್ನು ನೀಡಲಿದ್ದು, ಸಂಸ್ಥೆಯ ವಿವಿಧ ಪದಾಧಿಕಾರಿಗಳು ಭಾಗವಹಿಸುವರು.ಆದ್ದರಿಂದ ಈ ಕಾರ್ಯಾಗಾರದಲ್ಲಿ ಸುರಪುರ ತಾಲೂಕ ಸೇರಿದಂತೆ ಜಿಲ್ಲೆಯ ಎಲ್ಲಾ ಆಸಕ್ತ ಶಾಲಾ ಕಾಲೇಜುಗಳ ವಿದ್ಯಾರ್ಥಿಗಳು ಭಾಗವಹಿಸಬಹುದು ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಶರಣಬಸವ ಪಬ್ಲಿಕ್ ಶಾಲೆಯ ಮುಖ್ಯಗುರು ರೇವಪ್ಪ ಪಾಟೀಲ ಸಿದ್ದರಾಮ ಉಪಸ್ಥಿ ತರಿದ್ದರು.

ಅಂಬಿಗರ ಚೌಡಯ್ಯ ಜಯಂತಿ ಅದ್ದೂರಿಯಾಗಿ ಆಚರಿಸಲು ಕ್ರಮ ವಹಿಸಿ - ಸಿದ್ರಾಮೇಶ್ವರ



ಕೊಪ್ಪಳ ,ಜ.09-

ನಿಜಶರಣ ಅಂಬಿಗರ ಚೌಡಯ್ಯ ಜಯಂತಿಯನ್ನು ಅದ್ದೂರಿಯಾಗಿ ಆಚರಣೆಗೆ ಅಗತ್ಯ ಕ್ರಮವಹಿಸಬೇಕು ಎಂದು ಅಪರ ಜಿಲ್ಲಾಧಿಕಾರಿ ಸಿದ್ರಾಮೇಶ್ವರ ಹೇಳಿದರು.

ಅವರು ಗುರುವಾರ ಕೊಪ್ಪಳ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ನಿಜಶರಣ ಅಂಬಿಗರ ಚೌಡಯ್ಯ ಜಯಂತಿ ಆಚರಣೆ ಕುರಿತು ಕರೆದ ಪೂರ್ವಭಾವಿ ಸಭೆಯ ಅಧ್ಯಕ್ಷತೆವಹಿಸಿ ಮಾತನಾಡಿದರು.

ಜಿಲ್ಲಾ ಮಟ್ಟದ ನಿಜಶರಣ ಅಂಬಿಗರ ಚೌಡಯ್ಯ ಜಯಂತಿಯನ್ನು ಜನವರಿ 21 ರಂದು ಹಮ್ಮಿಕೊಳ್ಳಲಾಗುವುದು. ಅಂದು ಬೆಳಿಗ್ಗೆ 8.30ಕ್ಕೆ ಅಂಬಿಗರ ಚೌಡಯ್ಯನವರ ಭಾವಚಿತ್ರದ ಮೇರವಣಿಗೆಯು ನಗರದ ಸಿರಸಪ್ಪಯ್ಯನ ಮಠದ ಆವರಣದಿಂದ ಆರಂಭಗೊಂಡು ಸಾಹಿತ್ಯ ಭವನದವರೆಗೆ ಜರುಗಲಿದೆ. ನಂತರ 10.30 ಗಂಟೆಗೆ ನಗರದ ಸಾಹಿತ್ಯ ಭನವದಲ್ಲಿ ನಡೆಯಲಿರುವ ವೇದಿಕೆ ಸಮಾರಂಭದಲ್ಲಿ ನಿಜಶರಣ ಅಂಬಿಗರ ಚೌಡಯ್ಯನವರ ಭಾವಚಿತ್ರಕ್ಕೆ ಪೂಜೆ, ವಿಶೇಷ ಉಪನ್ಯಾಸ ಸೇರಿದಂತೆ ಇತರೆ ಕಾರ್ಯಕ್ರಮಗಳು ಜರುಗಲಿವೆ ಎಂದರು.

ಅಂಬಿಗರ ಚೌಡಯ್ಯ ಜಯಂತಿಯನ್ನು ಅರ್ಥಪೂರ್ಣ ಮತ್ತು ಅದ್ದೂರಿಯಾಗಿ ಆಚರಿಸಲು ಅಗತ್ಯ ಕ್ರಮ ಕೈಗೊಳ್ಳಬೇಕು. ಈ ಹಿನ್ನೆಲೆಯಲ್ಲಿ ಶಿಷ್ಟಾಚಾರದಂತೆ ಆಮಂತ್ರಣ ಪತ್ರಿಕೆ ಮುದ್ರಿಸಿ ಎಲ್ಲ ಗಣ್ಯರಿಗೆ ಆಹ್ವಾನ ನೀಡಬೇಕು. ಕೆಲಸ ಹಂಚಿಕೆ ಮಾಡಿದಂತೆ ಆಯಾ ಇಲಾಖೆಗಳ ಅಧಿಕಾರಿಗಳು ಪರಸ್ಪರ ಸಮನ್ವಯದಿಂದ ಸಿದ್ದತೆ ಮಾಡಿಕೊಳ್ಳಬೇಕು ಎಂದು ಸೂಚನೆ ನೀಡಿದರು.

ನಿಜಶರಣ ಅಂಬಿಗರ ಚೌಡಯ್ಯನವರ ಜಯಂತಿ ದಿನದಂದು, ಸಾಹಿತ್ಯ ಭವನ ಮತ್ತು ರಸ್ತೆ ಸ್ವಚ್ಛತೆ, ಮೆರವಣಿಗೆಯಲ್ಲಿ ಹಾಗೂ ವೇದಿಕೆ ಸಮಾರಂಭದಲ್ಲಿ ಪಾಲ್ಗೊಳ್ಳುವ ಜನರಿಗೆ ಕುಡಿಯುವ ನೀರಿನ ವ್ಯವಸ್ಥೆ ಕೈಗೊಳ್ಳಬೇಕು. ಈ ಜಯಂತಿಯನ್ನು ಜಿಲ್ಲೆಯ ಎಲ್ಲಾ ಶಾಲಾ ಕಾಲೇಜುಗಳು, ಎಲ್ಲಾ ಸರ್ಕಾರಿ ಕಚೇರಿಗಳಲ್ಲಿ ಆಚರಿಸುವಂತಾಗಬೇಕು. ಕಾರ್ಯಕ್ರಮಗಳ ಯಶಸ್ವಿಗೆ ಎಲ್ಲಾ ಸಮಾಜದ ಮುಖಂಡರು, ಸಾರ್ವಜನಿಕರು ಸಹಕರಿಸಬೇಕು ಎಂದು ಹೇಳಿದರು.

ಸಭೆಯಲ್ಲಿ ಪದವಿ ಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕ ಜಗದೀಶ್, ಪ್ರವಾಸೋದ್ಯಮ ಇಲಾ ಖೆಯ ಸಹಾಯಕ ನಿರ್ದೇಶಕ ನಾಗರಾಜ, ಡಾ. ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕರಾದ ಪುಷ್ಪ ಲತಾ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಕರ್ಣ ಕುಮಾರ್, ಸಮಾ ಜದ ಮುಖಂಡರಾದ ಸೋಮಣ್ಣ, ಹುಲುಗಪ್ಪ ಬಾರಕೇರ್, ಮತ್ತಿತರರು ವಿವಿಧ ಇಲಾಖೆಗಳ ಅಧಿಕಾರಿ ಮತ್ತು ಸಿಬ್ಬಂದಿಗಳು ಉಪಸ್ಥಿ ತರಿದ್ದರು.

ಕೇಂದ್ರ ಪುರಸ್ಕೃತ ಯೋಜನೆಗಳ ಜಾಗೃತಿ ಅಭಿಯಾನ ಅಂಗವಾಗಿ ರಂಗೋಲಿ ಸ್ಪರ್ಧೆ



ಬಳ್ಳಾರಿ,ಜ.09-

ವಿಕಸಿತ ಭಾರತ ಜಿ ರಾಮ್ ಜಿವಂದೇ ಮಾತರಂರಾಷ್ಟ್ರೀಯ ಗೀತೆಯ 150 ನೇ ವರ್ಷಾಚರಣೆ, ಕೇಂದ್ರ ಪುರಸ್ಕೃತ ಯೋಜನೆಗಳ ಜಾಗೃತಿ ಅಭಿಯಾನ ಮತ್ತು ವಸ್ತು ಪ್ರದರ್ಶನ ಅಂಗವಾಗಿ ನಗರದ ಜಿಲ್ಲಾ ಪಂಚಾಯತ್ ನ ಹೊಸ ಅಬ್ದುಲ್ ನಜೀರ್ ಸಾಬ್ ಸಭಾಂಗಣದಲ್ಲಿ ಗುರುವಾರ ರಂಗೋಲಿ ಸ್ಪರ್ಧೆ ಆಯೋಜಿಸಲಾಗಿತ್ತು.

ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸ್ವಯಂ ಸೇವಾ ಸಂಸ್ಥೆಗಳ ಮಹಿಳೆಯರಿಂದ ಕೇಂದ್ರ ಹಾಗು ರಾಜ್ಯ ಸರ್ಕಾರಗಳು ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿಗೆ ಅನುಷ್ಠಾನಗೊಳಿಸಿರುವ ಪೋಷಣ್ ಅಭಿಯಾನ, ಬೇಟಿ ಬಚಾವೋ ಬೇಟಿ ಪಡಾವೋ,ಮಾತೃವಂದನಾ ಯೋಜನೆಗಳು ಸೇರಿದಂತೆ ಮುಂತಾದವುಗಳ ಬಗ್ಗೆ ಅರಿವು ಮೂಡಿಸಲು ಸಹಕಾರಿಯಾಗುವಂತೆ ರಂಗೋಲಿ ಸ್ಪರ್ಧೆ ನಡೆಯಿತು.

ಜಿಲ್ಲೆಯ ವಿವಿಧೆಡೆಯಿಂದ ಬಂದ ಮಹಿಳೆಯರು, ದವಸ ಧಾನ್ಯ, ಹೂ, ರಂಗೋಲಿಗಳ ವಿವಿಧ ಬಣ್ಣಗಳ ಮೂಲಕ ಆಕರ್ಷಕವಾಗಿ ಚಿತ್ತಾರದಿಂದ ರಂಗೋಲಿ ಹಾಕಿದರು.

ಕಾರ್ಯಕ್ರಮ ಕುರಿತು ಆಕಾಶವಾಣಿಯೊಂದಿಗೆ ಮಾತನಾಡಿದ ಕೇಂದ್ರ ಸಂವಹನ ಇಲಾಖೆಯ ಕ್ಷೇತ್ರ ಪ್ರಚಾರ ಅಧಿಕಾರಿ ಶೃತಿ ಅವರು ಮಾಹಿತಿ ನೀಡಿ ವಿಕಸಿತ ಭಾರತದ ಬಗ್ಗೆ ಜನರಿಗೆಅರಿವು ಮೂಡಿಸಲು ವಿಭಿನ್ನ ಕಾರ್ಯಕ್ರಮಗಳ ಮೂಲಕ ಫಲಾನುಭವಿಗಳಿಗೆ ಇನ್ನಷ್ಟು ಮಾಹಿತಿ ನೀಡಲಾಗುವುದು ಎಂದರು.

ಮಹಿಳಾ ಮತ್ತು ಇಲಾಖೆಯ ಮೇಲ್ವಿಚಾರಕಿಮಹೇಶ್ವರಿ ಅವರು ಮಾತನಾಡಿ, ರಂಗೋಲಿ ಸ್ಪರ್ಧೆ ಮೂಲಕ ಇಲಾಖೆಯ ವಿವಿಧ ಯೋಜನೆಗಳ ಕುರಿತು ಸ್ಪರ್ಧೆ ಆಯೋಜಿಸಲಾಗಿದ್ದು, ಜ.09 ರಂದು ಪೌಷ್ಟಿಕ ಆಹಾರ ಪ್ರದರ್ಶನ ಕಾರ್ಯ ಕ್ರಮ ನಡೆಯಲಿದೆ ಎಂದರು.

ಝುರೀನಾ ಬೇಗಂ ಮಾತನಾಡಿ, ವಿವಿಧ ಬಣ್ಣ, ಹೂ, ಹಣ್ಣುಗಳ ಮೂಲಕ ಚಿತ್ರ ಬಿಡಿಸಿ ಸಾರ್ವಜನಿಕರಿಗೆ ಮಾಹಿತಿ ನೀಡಲಾಗುತ್ತಿದೆ ಎಂದರು.

ಈ ವೇಳೆ ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಇತರರು ಇದ್ದರು.

ಅದೇ ರೀತಿಯಾಗಿ ಜ.09 ರಂದು ಕೇಂದ್ರ, ರಾಜ್ಯ ಪುರಸ್ಕೃತ ಯೋಜನೆಗಳ ಕುರಿತು ಸಮಗ್ರ ಮಾಹಿತಿಯನ್ನು ಒದಗಿಸಲು ಮಾಧ್ಯಮ ಪ್ರತಿನಿಧಿಗಳಿಗೆ ವಾರ್ತಾಲಾಪ ಕಾರ್ಯಾಗಾರ ಹಮ್ಮಿಕೊಂಡಿದೆ. ಜೊತೆಗೆ ಮೂರು ದಿನಗಳ ವಸ್ತು ಪ್ರದರ್ಶನವೂ ನಡೆಯಲಿದೆ.

ಒಂದನೇಯ ಪುಟದಿಂದ

ಶಾಲೆ ಆವರಣದಲ್ಲಿ ಹಾಸ್ಟಲ್ ನಿರ್ಮಿಸದಂತೆ ಹಳೇ ವಿದ್ಯಾರ್ಥಿಗಳ ಒತ್ತಾಯ

ಐರೆಡ್ಡಿ, ಅಮರೇಶ ನಂದ್ವಾರೆಡ್ಡಿ, ಪ.ಪಂ ಸದಸ್ಯರಾದ ಅಜೀತ್ ಕುಮಾರ ಹೊನ್ನಟಗಿ, ರಾಚೋಟಿ, ಪಿ.ಕೃಷ್ಣ, ಚನ್ನಪ್ಪ ಬೂದಿನಾಳ, ಮಲ್ಲಿಕಾರ್ಜುನ ಸಿಕಂಟಿ, ಅಪ್ಪಾಜಿನಾಯಕ, ಮಹಾಂತೇಶ ಸ್ವಾಮಿ, ಟಿ.ರಮೇಶ ನಾಯಕ, ಹನುಮೇಶ ನಾಯಕ, ಜಯರಾಜ ಸೇರಿದಂತೆ ಇನ್ನಿತರರು ಇದರು.

ಫಲಾನುಭವಿಗಳ ಪಟ್ಟಿಯಲ್ಲಿ ಅರ್ನಹರು:ಬಸನಗೌಡ ಬಾದರ್ಲಿ ವಿರುದ್ಧ ಟೀಕೆ

ಟೀಕೆ ಮಾಡುತ್ತಿರುವದು ನಾಚಿಕೆಗೇಡು. ಎಂಎಲ್ಸಿ ಬಸನಗೌಡ 2023 ರಲ್ಲಿ ಜೆಡಿಎಸ್, ಬಿಜೆಪಿಪರ ಕೆಲಸ ಮಾಡಿದವರಿಗೆ ಕೊಳವೆಬಾವಿ ನೀಡಲು ಮುಂದಾಗಿದ್ದಾರೆ ಎಂದು ಆರೋಪಿಸಿದರು.

ಈ ಸಂದರ್ಭದಲ್ಲಿ ಮುಖಂಡರಾದ ಡಾ.ರಾಮಣ್ಣ ಗೋನವಾರ, ಬಿ.ಹೆಚ್.ನಾಯಕ, ರಾಮಣ್ಣ ಸಾಸಲಮರಿ, ಅಂಬ್ರೂಸ್, ಸುಭಾಷ ಫ್ರಾಂಕ್ಲೀನ್, ನಾಗರಾಜ ರಾಮತ್ನಾಳ, ಹನುಮಂತಪ್ಪ, ನರಸಪ್ಪ ಕಟ್ಟಿಮನಿ, ವೈ.ಅನಿಲಕುಮಾರ, ನಾಗಪ್ಪ ಗೋಮರ್ಸಿ,ಹನುಮಂತಪ್ಪ ಬೂದಿಹಾಳ ವಕೀಲರು,ಹನುಮಂತಪ್ಪ ಗೋಮರ್ಸಿ, ಅಮರಯ್ಯ, ನಾಗರಾಜ ರಾಮತ್ನಾಳ ಸೇರಿದಂತೆ ಅನೇಕರು ಇದ್ದರು.

ಜ.20 ಪಟ್ಟಣ ಪಂಚಾಯತಿ ಅಧ್ಯಕ್ಷ ಸ್ಥಾನ ಮುಹೂರ್ತ: ಸಾಮಾನ್ಯ ಸ್ಥಾನಕ್ಕೆ 4 ಆಕಾಂಕ್ಷಿಗಳು

ಆಕಾಂಕ್ಷಿಗಳು :-

ಅಧ್ಯಕ್ಷ ಸ್ಥಾನ ಸಾಮಾನ್ಯವಾಗಿರುವ ಕಾರಣ ತೆರವಾದ ಸ್ಥಾನಕ್ಕೆ ವಾರ್ಡ ನಂ 04 ಹಸೇನ ಅಲಿಸಾಬ, ವಾರ್ಡ ನಂ06 ಹಾಜಿಚೌದ್ರಿ,ವಾರ್ಡ 09 ಸೂರಿದುರುಗಣ್ಣ ನಾಯಕ, ವಾರ್ಡ ನಂ 16 ಮೌಲಾಸಾಬ ವರ್ಚಸ್ ಪ್ರಭಲ ಆಕಾಂಕ್ಷಿಯಾಗಿದ್ದಾರೆ. ಬಿಜೆಪಿಯಿಂದ ಕೃಷ್ಣ ನಾಯಕ, ಸಂದೀಪ್ ಪಾಟೀಲ್, ಪಕ್ಷೇತರ ಅಭ್ಯರ್ಥಿ ಹನುಮಂತಿ ಮಲ್ಲಪ್ಪ ಆಕಾಂಕ್ಷಿಗಳಾಗಿದ್ದಾರೆ. ಕಳೆದ ಬಾರಿ ಪಕ್ಷೇತರ ಅಭ್ಯರ್ಥಿ (ಬಿಜೆಪಿ) ಜೊತೆ ಗುರುತಿಸಿಕೊಂಡಿದ ಪಕ್ಷೇತರ ಸದಸ್ಯ ಹೆಚ್ ಮಾರ್ಕಪ್ಪ ಈಗ ಕಾಂಗ್ರೇಸ್ ಪಕ್ಷದ ಸದಸ್ಯರ ಜೊತೆ ಹೊಂದಾಣಿಕೆ ಮಾಡಿಕೊಂಡಿದ್ದಾರೆಂದು ಹೇಳಲಾಗುತ್ತಿದೆ.

ಆಕಾಂಕ್ಷಿಗಳು ಕಳೆದ ಒಂದು ವಾರದಿಂದ ಮುಖಂಡರ ಸದಸ್ಯರ ಮನೆಗಳಿಗೆ ಹೋಗಿ ನಮಗೆ ಅವಕಾಶ ಕೊಡಿ ಎಂದು ಕೇಳುತ್ತಿದ್ದಾರೆ. ಕಾಂಗ್ರೇಸ್ ಪಕ್ಷದಲ್ಲಿ 4 ಜನ ಆಕಾಂಕ್ಷಿಗಳು ಇರುವುದರಿಂದ ಅವರ ಒಳ ಜಗಳದ ಲಾಭ ಪಡೆಯಲು ಬಿಜೆಪಿ ಕಾಯುತ್ತಿದೆ. ಯಾವುದೇ ಪಕ್ಷಕ್ಕೆ ನಿಚ್ಚಳ ಬಹುಮತ ಇಲ್ಲದ ಕಾರಣ ಅಧ್ಯಕ್ಷ ಸ್ಥಾನ ಮತ್ತೆ ಕಾಂಗ್ರೇಸ್ ಪಡೆಯುತ್ತದೆ..? ಬಿಜೆಪಿ ಪಾಲಾಗುತ್ತದೆ ಎಂಬುದು ಪಕ್ಷೇತರ ಸದಸ್ಯರ ನಿರ್ಣಾಯಕರಾಗಿದ್ದಾರೆ.

ಪತ್ರಿಕೆ ಓದುವ ಹವ್ಯಾಸ ಬೆಳಸಿಕೊಳ್ಳಿ

ಸರಕಾರಿ ಶಾಲೆ ಜಾಗ ಒತ್ತುವರಿ ಸ್ವಾಧೀನಕ್ಕೆ ಒತ್ತಾಯ



ರಾಯಚೂರು, ಜ.9-

ತಾಲೂಕಿನ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಮಿಟ್ಟಿಮಲ್ಕಾಪೂರು ಶಾಲಾ ಆವರಣದ ಒತ್ತುವರಿ ಜಾಗದಲ್ಲಿ ಕಟ್ಟಡ ನಿರ್ಮಿಸಿ ಬಾಡಿಗೆ ನೀಡಿರುವ ಕಟ್ಟಡ

ಶಾಲೆಗೆ ಸ್ವಾಧೀನಪಡಿಸಿಕೊಳ್ಳಬೇಕು ಎಂದು ಗ್ರಾಮಸ್ಥರು ತಹಸೀಲ್ದಾರ್ ಗೆ ಮನವಿ ಸಲ್ಲಿಸಿ ಒತ್ತಾಯಿಸಿದೆ.

ತಾಲೂಕಿನ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಮಿಟ್ಟಿಮಲ್ಕಾಪೂರು ಗ್ರಾಮದಲ್ಲಿ ಶಾಲಾ ಆವರಣಕ್ಕೆ ಸಂಬಂಧಿಸಿದ ಸರ್ವೆ ನಂ. 1 ರ ಸರ್ಕಾರಿ ಗಾಯಿರಾಣ ಜಾಗವಿದ್ದು, ಇದರಲ್ಲಿ ಶಾಲೆಗೆ ಮೀಸಲಿರಿಸಿದ 00-20 ಗುಂಟೆ ಜಾಗ ಭೂ ಮಂಜೂರಾತಿ ಮಾಡಲಾಗಿದೆ.

ಇದರಲ್ಲಿ ಗಣೇಶ ತಂದೆ ತಾಯಪ್ಪ ಈತನು 5 ಗುಂಟೆ ಜಾಗವ ಒತ್ತುವರಿ ಮಾಡಿದ್ದಲ್ಲದೇ, ಉಳಿದ 00-15 ಗುಂಟೆ ಜಾಗದಲ್ಲಿ ಅಗಲ 10 ರಿಂದ 15 ಫೀಟ್ ಉದ್ದ ಅಂದಾಜು 1000 ಅಡಿಯಷ್ಟು ಇರುವ ಜಾಗ ಒತ್ತುವರಿ ಮಾಡಿಕೊಂಡಿದ್ದಾರೆ ಎಂದು ದೂರಿದರು.ಇದು ಅಳತೆ ಮಾಡಬೇಕಾದರೂ ಸಹ ತಾರತಮ್ಯ ವೇಸಿಗಲಾಗಿದೆ.

ಶಾಲೆಗೆ ಉತ್ತರ ದಿಕ್ಕಿನಲ್ಲಿ ಮೋದಿನ್ ಪಾಟೀಲ್ ತಂದೆ ಕಾಶೀಂ ಪಾಟೀಲ್ ಎಂಬ ವ್ಯಕ್ತಿ ಶಾಲೆಗೆ ಸಂಬಂಧಿಸಿದ ಜಾಗ ಒತ್ತುವರಿ ಮಾಡಿ ಈ ಜಾಗದಲ್ಲಿ, ಹಳೆ ಕಟ್ಟಡವಿದ್ದು, ಈ ಕಟ್ಟಡವು ಮೂಲತಃ ಕುರುಬರ ಲಂಕಮ್ಮ ವ್ಯಾಪ್ತಿಗೆ ಬರುವ ಜಾಗ ಬಿಟ್ಟುಕೊಡಲಾಗಿದೆ. ಆದರೆ ಮೋದಿನ್ ಪಾಟೀಲ್ ತಂದೆ ಕಾಶೀಂ ಪಾಟೀಲ್ ಈತನು ದೌರ್ಜನ್ಯದಿಂದ ಕಟ್ಟಡ ತನ್ನ ಸ್ವಾಧೀನಕ್ಕೆ ಪಡೆಸಿಕೊಂಡಿದ್ದಾನೆ. ಈಗ ಈತನ ಮಗನಾದ ಮೋದಿನ್‌ಪಾಟೀಲ್ ನನ್ನ ತಂದೆಗೆ ಸಂಬಂಧಿಸಿದ್ದು ಕಟ್ಟಡ ಎಂದು ದೌರ್ಜನ್ಯದಿಂದ ತನ್ನ ಸ್ವಾಧೀನಕ್ಕೆ ಪಡೆದುಕೊಂಡು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ಮಿಟ್ಟಿಮಲ್ಕಾಪೂರು ಇವರಿಗೆ ಬಾಡಿಗೆ ನೀಡಿದ್ದಾರೆ.ಶಾಲೆಗೆ ಸಂಬಂಧಸಿದ ಜಾಗ ಕೂಡಲೇ ತೆರವುಗೊಳಿಸಬೇಕು ಎಂದು ಒತ್ತಾಯಿಸಿದೆ. ಈ ಸಂದರ್ಭದಲ್ಲಿ ಗ್ರಾಮಸ್ಥರು, ದಲಿತ ಮುಖಂಡರು ಸೇರಿದಂತೆ ಉಪಸ್ಥಿತರಿದ್ದರು

ನಕಲಿ ಮುಟೇಷನ್ ದಾಖಲೆ ಸೃಷ್ಟಿ ಆರೋಪ: ಡಿ.ಸಿ.ಸಿ. ಬ್ಯಾಂಕ್ ನಿರ್ದೇಶಕರ ಸೇರಿ ಮೂವರ ವಿರುದ್ಧ ಕ್ರಿಮಿನಲ್ ಪ್ರಕರಣ

ಯಾದಗಿರಿ,ಜ.08-

ಭೂಮಿಯ ಮಾಲಿಕತ್ವಕ್ಕೆ ಸಂಬಂಧಿಸಿದಂತೆ ನಕಲಿ ಮುಟೇಷನ್ ದಾಖಲೆಗಳನ್ನು ಸೃಷ್ಟಿಸಿ ಸರ್ಕಾರಿ ಸೀಲ್-ಮೊಹರುಗಳನ್ನು ದುರು ಪಯೋಗಪಡಿಸಿಕೊಂಡು ವಂಚನೆ ನಡೆಸಿದ ಆರೋಪದ ಮೇಲೆ ಡಿ.ಸಿ.ಸಿ. ಬ್ಯಾಂಕ್ ನಿರ್ದೇಶಕರೊ ಬ್ಬರು ಸೇರಿದಂತೆ ಮೂವರ ವಿರುದ್ಧ ಸುರಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ತಿಮ್ಮಾಪುರ ನಿವಾಸಿ ಅಶೋಕ ತಂದೆ ಚಂದ್ರಶೇಖಪ್ಪ ಸಜ್ಜನ್ (58) ಅವರು ನೀಡಿದ ಲಿಖಿತ ದೂರಿನ ಮೇರೆಗೆ, ಬಸವರಾಜ ತಂದೆ ರಾಜಶೇಖರಪ್ಪ ಸಜ್ಜನ್, ಸುರೇಶ ತಂದೆ ರಾಜಶೇಖರಪ್ಪ ಸಜ್ಜನ್ ಹಾಗೂ ಪ್ರಕಾಶ ತಂದೆ ರಾಜಶೇಖರಪ್ಪ ಸಜ್ಜನ್ ಎಂಬವರ ವಿರುದ್ಧ ಐಪಿಸಿ ಕಲಂಗಳು 464, 465, 468, 471 ಮತ್ತು 420 ಅಡಿಯಲ್ಲಿ ಗುನ್ನೆ ನಂ. 04/2026 ದಾಖಲಿಸಿಕೊಂಡು ಪೊಲೀಸರು ತನಿಖೆ ಕೈಗೊಂಡಿದ್ದಾರೆ.

ನಕಲಿ ದಾಖಲೆಗಳ ಆರೋಪ : ದೂರುದಾರರ ಪ್ರಕಾರ, ವಣಕಿಹಾಳ ಗ್ರಾಮದ ಸರ್ವೆ ನಂ. 86/1 ಹಾಗೂ ಹಸನಾಪುರ ಗ್ರಾಮದ ಸರ್ವೆ ನಂ. 44/1, 44/5, 44/6 ಮತ್ತು 44/7 ಗೆ ಸಂಬಂಧಿಸಿದಂತೆ 1996ರ ಮುಟೇಷನ್ ನಂ. 28 ಮತ್ತು 30 ರ ದಾಖಲೆಗಳನ್ನು ಆರೋಪಿತರು ನಕಲಿಯಾಗಿ ತಯಾರಿಸಿ, ಅವುಗಳನ್ನು ನೈಜ ದಾಖಲೆಗಳೆಂದು ತೋರಿಸಿ ವಿವಿಧ ಹಂತಗಳಲ್ಲಿ ಸಲ್ಲಿಸಿದ್ದಾರೆ ಎನ್ನಲಾಗಿದೆ.

ಈ ಮುಟೇಷನ್ ದಾಖಲೆಗಳಲ್ಲಿ ಗ್ರಾಮ ಲೆಕ್ಕಾಧಿಕಾರಿ ಹಾಗೂ ಸಂಬಂಧಿತ ಅಧಿಕಾರಿಗಳ ಸಹಿ ಇಲ್ಲದೇ, ಸರ್ಕಾರಿ ಕಚೇರಿಗಳ ಸೀಲ್- ಮೊಹರುಗಳನ್ನು ದುರುಪ ಯೋಗಪಡಿಸಿಕೊಂಡು ದಾಖಲೆ ಗಳನ್ನು ತಯಾರಿಸಲಾಗಿದೆ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

ಈ ಕುರಿತು ಮಾನ್ಯ ಜಿಲ್ಲಾಧಿಕಾರಿ ಹಾಗೂ ಸುರಪುರ ತಹಸೀಲ್ದಾರರ ಮಟ್ಟದಲ್ಲಿ ನಡೆದ ಪರಿಶೀಲನೆಗಳಲ್ಲಿ, ಸಲ್ಲಿಸಲಾದ ಮುಟೇಷನ್ ದಾಖಲೆಗಳು ಹಾಗೂ ಗ್ರಾಮ ಲೆಕ್ಕಾಧಿಕಾರಿಗಳ ಹೆಸರಿನಲ್ಲಿ ನೀಡಲಾಗಿದೆ ಎನ್ನಲಾದ ನಕಲು ಪ್ರತಿಗಳು ನೈಜವಲ್ಲ, ಕೊಟ್ಟಿ ತಯಾರಿಸಿದ ದಾಖಲೆಗಳು ಎಂಬುದು ಸ್ಪಷ್ಟವಾಗಿದೆ ಎಂದು ದೂರಿನಲ್ಲಿ ತಿಳಿಸಲಾಗಿದೆ.

ತಹಸೀಲ್ದಾರರು ಜಿಲ್ಲಾಧಿಕಾರಿಗಳಿಗೆ ಸಲ್ಲಿಸಿದ ವರದಿಗಳಲ್ಲಿ, 1993-94 ರಿಂದ 1997-98ರ ಪಹಣಿ ಪತ್ರಿಕೆಗಳ ಕಾಲಂ ಸಂಖ್ಯೆ 9 ರಲ್ಲಿಯೂ ಯಾವುದೇ ಕಾನೂನು ಬದ್ಧ ದಾಖಲೆ ಇಲ್ಲದೇ ಹೆಸರು ನಮೂದಿಸಿರುವುದು ಪತ್ತೆಯಾಗಿದೆ ಎಂದು ಉಲ್ಲೇಖಿಸಲಾಗಿದೆ.

ಈ ಎಲ್ಲಾ ದಾಖಲೆಗಳು ಹಾಗೂ ಮಾಹಿತಿ ಹಕ್ಕು ಕಾಯ್ದೆಯಡಿ ಪಡೆದ ಉತ್ತರಗಳ ಆಧಾರದಲ್ಲಿ, ಆರೋಪಿತರು ಉದ್ದೇಶಪೂರ್ವ ಕವಾಗಿ ನಕಲಿ ದಾಖಲೆಗಳನ್ನು ಸೃಷ್ಟಿಸಿ ತಮ್ಮ ಕುಟುಂಬದ ಆಸ್ತಿಗೆ ಹಾನಿ ಮಾಡುವ ಉದ್ದೇಶ ಹೊಂದಿದ್ದಾರೆ ಎಂದು ದೂರುದಾರರು ಆರೋ ಪಿಸಿದ್ದಾರೆ.

ತೊಂಡಿಹಾಳ ಹುಲಿಗೆಮ್ಮದೇವಿ ಜಾತ್ರೆ:ಅನಿಷ್ಠ ಪದ್ಧತಿಗೆ ಕಡಿವಾಣ

ತಾಲೂಕಾಡಳಿದಿಂದ ಜಾಗೃತಿ ಸಭೆ



ಮುದಗಲ್,ಜ.08-

ಲಿಂಗಸುಗೂರು ತಾಲೂಕಿನ ಹಾಗೂ ಮುದಗಲ್ಲ ಕಂದಾಯ ಹೋಬಳಿಯ ಗಡಿ ಭಾಗದ ತೊಂಡಿಹಾಳ ಗ್ರಾಮದ ಗ್ರಾಮದೇವತೆ ಹುಲಿಗೆಮ್ಮ ದೇವಿ ಜಾತ್ರೆಯಲ್ಲಿ ದೇವತೆಯ ಹೆಸರಿನಲ್ಲಿ ನಡೆಯುವ ದೇವದಾಸಿ ಪದ್ಧತಿ, ಅರೆಬೆತ್ತಲೆ, ಪ್ರಾಣಿಬಲಿ, ಉರಳು ಸೇವೆ, ಮದ್ಯಪಾನ ಸೇರಿದಂತೆ ಮುಂತಾದ ಅನಿಷ್ಠ ಪದ್ಧತಿಗಳಿಗೆ ಕಡಿವಾಣ ಹಾಕಲಾಗುವುದು ಎಂದು ತಾಲೂಕಾ ದಂಡಾಧಿಕಾರಿ ಹಾಗೂ ಲಿಂಗಸುಗೂರ ತಹಶೀಲ್ದಾರ್ ಕುಮಾರಿ ಸತ್ಯಮ್ಮ ಹೇಳಿದರು. ಸಮೀಪದ ತೊಂಡಿಹಾಳ ಗ್ರಾಮದ ಹುಲಿಗೆಮ್ಮದೇವಿ ಜಾತ್ರಾ ಮಹೋತ್ಸವದ ಅಂಗವಾಗಿ ತಾಲೂಕಾ ಆಡಳಿತದ ವತಿಯಿಂದ ಸಾರ್ವಜನಿಕ ಜಾಗೃತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡುತ್ತಾ ಇದೇ ತಿಂಗಳ 16 ರಿಂದ 18 ರವರೆಗೆ 3 ದಿನಗಳ ಕಾಲ ಜರುಗುವ ಜಾತ್ರಾ ಮಹೋತ್ಸವದಲ್ಲಿ ಭಕ್ತರು ಯಾವುದೇ ದೇವದಾಸಿ ಪದ್ಧತಿ ಸೇರಿದಂತೆ ಅನಿಷ್ಠ ಪದ್ಧತಿಗಳಿಗೆ ಮಾರುಹೋಗದೆ, ಧಾರ್ಮಿಕ ಕ್ರಾರ್ಯಕ್ರಮದ ಮೂಲಕ ದೇವಿಯನ್ನು ಆರಾಧಿಸಬೇಕು. ಅದನ್ನು ಬಿಟ್ಟು ದೇವಿ ಹೆಸರಲ್ಲಿ ದೇವದಾಸಿ ಪದ್ದತಿ, ಅರೆಬೆತ್ತಲೆ ಸೇವೆ, ಪ್ರಾಣಿಬಲಿ, ಮಧ್ಯಪಾನ ಸೇರಿದಂತೆ ವಿವಿಧ ಅನಿಷ್ಠ ಪದ್ದತಿಗಳನ್ನು ಆಚರಣೆ ಮಾಡಬಾರದು ಎಂದರು. ಜಾತ್ರೆಯಲ್ಲಿ ಅನಿಷ್ಠ ಪದ್ದತಿ ಆಚರಣೆ ಮಾಡುವವರ, ಪ್ರಚೊಧಿಸುವವರ ವಿರುದ್ಧ ಸೂಕ್ತ ಕಾನೂನು ಕ್ರಮ ಜರುಗಿಸಲಾಗುವುದು ಎಂದು ಎಚ್ಚರಿಕೆ ನೀಡಿದರು. ಜಾತ್ರೆಯಲ್ಲಿ ಭಕ್ತರಿಗೆ ಕುಡಿಯುವ ನೀರು, ವಿದ್ಯುತ್ ದೀಪ, ರಸ್ತೆ, ಬಸ್ಸಿನ ಸೌಕರ್ಯ ಸೇರಿದಂತೆ ಯಾವುದೇ ಮೂಲ ಸೌಕರ್ಯದ ತೊಂದರೆ ಯಾಗದಂತೆ ಜಾಗ್ರತ ವಹಿಸಲು ಕಂದಾಯ ಇಲಾಖೆ ಹಾಗೂ ಹಲಕಾವಟಗಿ ಗ್ರಾ.ಪಂ.ಗೆ ವಹಿಸಲಾಗಿದೆ ಎಂದರು.

ಜಾಗೃತಿ ಸಭೆಯಲ್ಲಿ ಗ್ರಾ.ಪಂ.ಅಧ್ಯಕ್ಷೆ ಸಂಗಮ್ಮ ಗೌಂಡಿ, ಜಿ.ಪಂ. ಎಇಇ ಹನಮಂತಪ್ಪ, ಪಶು ಇಲಾಖೆಯ ಸಹಾಯಕ ನಿರ್ದೇಶಕ ಅಮರೇಗೌಡ ಪಾಟೀಲ್, ಸಿಪಿಐ ರಾಮಪ್ಪ ಜಲಗೇರಿ, ಮುದಗಲ್ಲ ಪಿಎಸ್ಐ ಪಿಎಸೈ ವೆಂಕಟೇಶ ಮಾಡಗಿರಿ, ತಾ.ಪಂ.ವ್ಯವಸ್ಥಾಪಕ ಅಮರೇಶ ಗೌಡೂರು, ಸಿಡಿಪಿಓ ನಾಗರತ್ನ, ತಾಲೂಕಾ ಆರೋಗ್ಯಾಧಿಕಾರಿ ಅಮರೇಶ ಪಾಟೀಲ್, ಅಗ್ನಿಶಾಮಕದಳ ಅಧಿಕಾರಿ ಹೊನ್ನಪ್ಪ, ಮುದಗಲ್ ಪುರಸಭೆ ಮುಖ್ಯಾಧಿಕಾರಿ ಪ್ರವೀಣಕುಮಾರ ಬೋಗಾರ, ಉಪತಹಶೀಲ್ದಾರ್ ತುಳುಜಾರಾವ್ ಸಿಂಗ್,ಕಂದಾಯ ನಿರೀಕ್ಷಕ ಶಂಕ್ರಪ್ಪ, ಗ್ರಾಮಲೆ ಕ್ಕಾಧಿಕಾರಿ ಇಮಾಮ ಸಾಬ, ಪಿಡಿಓ ಶಶಿಕಲಾ ಪಾಟೀಲ್, ಸೇರಿದಂತೆ ಜೆಸ್ಕಾಂ, ಮೀನುಗಾರಿಕೆ,ಸಮಾಜ ಕಲ್ಯಾಣ, ತೋಟಗಾರಿಕೆ, ಅಬಕಾರಿ ಇಲಾಖೆಯ ಅಧಿಕಾರಿಗಳು ಹಾಗೂ ಗ್ರಾಮಸ್ಥರು, ದಲಿತ ಸಂಘಟನೆ ಮುಖಂಡರು, ಸೇರಿದಂತೆ ಗ್ರಾ.ಪಂ.ಸದಸ್ಯರಿದ್ದರು.

ಜಾಗೃತಿ ಸಭೆಗೆ ಪತ್ರಕರ್ತರಿಗೆ ಮಾಹಿತಿ ನೀಡಲು ಅಧಿಕಾರಿಗಳ ನಿರ್ಲಕ್ಷ ಕ್ರಮಕ್ಕೆ ಆಗ್ರಹ

ತಾಲೂಕಿನ ಗಡಿ ಭಾಗದ ತೊಂಡಿಹಾಳ ಹುಲಿಗೆಮ್ಮ ದೇವಿ ಜಾತ್ರೆ ಅನಿಷ್ಠ ಪದ್ಧತಿಗಳಿಗೆ ಹೆಸರು ವಾಸಿಯಾಗಿದ್ದರಿಂದ ಮುದ್ರಣ ಮಾಧ್ಯಮಗಳ ವರದಿಯಿಂದಲೇ ಸರಕಾರ ಕಣ್ಣು ತೆರೆಯುವಂತಾಯಿತು. ದಲಿತ ಸಂಘಟನೆಗಳ ಹೋರಾಟ ಕೂಡ ನಿರಂತರವಾಗಿ ಆರಂಭವಾದವು. ಸರಕಾರ ಜಾಗೃತಿ ಸಭೆಯ ಮೂಲಕ ಮತ್ತು ತಾಲೂಕಾ ಮಟ್ಟದ ಎಲ್ಲ ಇಲಾಖೆ ಅಧಿಕಾರಿಗಳನ್ನು ಕರ್ತವ್ಯಕ್ಕೆ ನಿಯೋಜಿಸಿ,

ಪೋಲೀಸ ಇಲಾಖೆಯ ಕಣ್ಗಾವಲಿನಲ್ಲಿ ಜಾತ್ರೆಯನ್ನು ಆಯೋಜಿಸಿ ಅನಿಷ್ಠ ಪದ್ಧತಿಗಳಿಗೆ ಕಡಿವಾಣ ಹಾಕುವಂತಾಯಿತು. ಆದರೆ ತಾಲೂಕಾ ಆಡಳಿತ ನಡೆಸುವ ಜಾಗೃತಿ ಸಭೆಗೆ ಪತ್ರಕರ್ತರಿಗೆ ಕಂದಾಯ, ಪೋಲೀಸ, ಪಂಚಾಯತ ಇಲಾಖೆಯವರು ಮಾಹಿತಿ ನೀಡದೇ ಸಭೆ ನಡೆಸುತ್ತಿರುವದು ವಿಪರ್ಯಾಸದ ಸಂಗತಿ. ಇನ್ನಾದರೂ ಇಂತಹ ಮಹತ್ವದ ಸಭೆಗೆ ಪತ್ರಕರ್ತರಿಗೆ ಮಾಹಿತಿ ನೀಡಬೇಕು, ತಪ್ಪಿತಸ್ಥ ಅಧಿಕಾರಿಗಳಿಗೆ ಕ್ರಮ ಕೈಕೊಳ್ಳಬೇಕೆಂದು ಪ್ರಗತಿಪರ ಸಂಘಟಕರು ಒತ್ತಾಯಿಸಿದ್ದಾರೆ.

12 ರಂದು ದಸಂಸ ರಾಜ್ಯ ಮಟ್ಟದ ಜನ ಜಾಗೃತಿ ಸಮಾವೇಶ

ಸುರಪುರ,ಜ.08-

ಶಿವಮೊಗ್ಗ ಜಿಲ್ಲೆಯ ತೀರ್ಥ ಹಳ್ಳಿಯಲ್ಲಿ ಬುದ್ಧನ ಕಡೆಗೆ ದಲಿತ ಸಂಘರ್ಷ ಸಮಿತಿ ನಡಿಗೆ ರಾಜ್ಯ ಮಟ್ಟದ ಜನ ಜಾಗೃತಿ ಸಮಾವೇಶ ಹಮ್ಮಿಕೊಳ್ಳಲಾಗಿದೆ ಎಂದು ಕರ್ನಾಟಕ ದಲಿತ ಸಂಘರ್ಷ ಸಮಿತಿ ಲಕ್ಷ್ಮೀನಾರಾಯಣ ನಾಗವಾರ ಬಣದ ತಾಲೂಕ ಸಂಚಾಲಕ ಮಾನಪ್ಪ ಭಂಡಾರಿ ತೆಳ್ಳಗಿ ತಿಳಿಸಿದ್ದಾರೆ.

ಈ ಕುರಿತು ಪ್ರಕಟಣೆ ನೀಡಿ, ಜನವರಿ 12 ರಂದು ಸೋಮವಾರ ಬೆಳಗ್ಗೆ ಕಾರ್ಯಕ್ರಮ ನಡೆಯಲಿದ್ದು, ಯಾದಗಿರಿ ಜಿಲ್ಲೆಯಿಂದ ಸುಮಾರು ಎರಡು ನೂರು ಜನ ಭಾಗವಹಿಸುವ ನಿರೀಕ್ಷೆ ಇದೆ ಎಂದು ತಿಳಿಸಿದ್ದಾರೆ.

ದಲಿತ ಚೇತನ ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿಯ ದಿವಂಗತ ಲಕ್ಷ್ಮಿ ನಾರಾಯಣ ನಾಗವಾರ ಪ್ರಥಮ ವರ್ಷದ ಪುಣ್ಯಸ್ಮರಣೆ ಅಂಗವಾಗಿ ರಾಜ್ಯಮಟದ

ಜನಜಾಗೃತಿ ಸಮಾವೇಶ ಆಯೋಜಿಸಿದ್ದು, ಜಿಲ್ಲೆಯ ಎಲ್ಲಾ ತಾಲೂಕುಗಳಿಂದ ದಲಿತ ಸಂರ್ಷ ಸಮಿತಿ ಚಿಂತಕರು,ಹಿರಿಯರು, ಪ್ರಗತಿಪರ ವಿಚಾರವಂತರು ಭಾಗ ವಹಿಸಲಿದ್ದಾರೆ ಎಂದು ತಿಳಿಸಿದ್ದಾರೆ.

ಈ ಸಂದರ್ಭದಲ್ಲಿ ಜಿಲ್ಲಾ ಮುಖಂಡ ಅಪ್ಪಣ್ಣ ಗಾಯಕವಾಡ, ಶರಣಪ್ಪ ವಾಗಣಗೇರಾ, ಪಕೀರಪ್ಪ ಗೌಡ ವಾಗಣಗೇರಾ, ತಾಲೂಕ ಮುಖಂಡ ಮರಿಯಪ್ಪ ಕಟ್ಟಿಮನಿ ಕಕ್ಕೇರಾ,ಕಾನೂನು ಸಲಹೆಗಾರ ರವಿ ನಾಯಕ ಇದ್ದರು.

ಸರ್ಕಾರಿ ಶಾಲೆಗಳಲ್ಲಿ ವಿದ್ಯಾರ್ಥಿಗಳ ಪ್ರವೇಶ ಹೆಚ್ಚಿಸಲು ಅಧಿಕಾರಿಗಳು ಅಗತ್ಯ ಕ್ರಮಕೈಗೊಳ್ಳಲು ಸಚಿವ ಎಸ್. ಮಧು ಬಂಗಾರಪ್ಪ ಸೂಚನೆ



ಕಲಬುರಗಿ,ಜ.08-

ವಿದ್ಯಾರ್ಥಿಗಳ ಶೈಕ್ಷಣಿಕ ಬೆಳವಣಿಗೆಗೆ ಸಾಕಷ್ಟು ಸೌಲಭ್ಯಗಳನ್ನು ನೀಡಿರುವ ಸರ್ಕಾರಿ ಶಾಲೆಗಳಲ್ಲಿ ವಿದ್ಯಾರ್ಥಿಗಳ ಪ್ರವೇಶ ಮತ್ತಷ್ಟು ಹೆಚ್ಚಳವಾಗಲು ಅಗತ್ಯ ಕ್ರಮಗಳನ್ನು ಕೈಗೊಳ್ಳುವಂತೆ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಎಸ್. ಮಧು ಬಂಗಾರಪ್ಪ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಬುಧುವಾರದಂದು ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಜಿಲ್ಲಾ ಇಲಾಖಾ ಪ್ರಗತಿ ಪರಿಶೀಲನಾ ಸಭೆಯಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಸರ್ಕಾರಿ ಶಾಲೆಗಳಲ್ಲಿ ಎಲ್‌ಕೆ.ಜಿ. ಯುಕೆಜಿ ತರಗತಿ ಪ್ರಾರಂಭಿಸಲಾಗಿದೆ ಮತ್ತು ದ್ವಿ ಮಾಧ್ಯಮ ಶಾಲೆಗಳನ್ನು ಪ್ರಾರಂಭಿಸಲಾಗಿದೆ ಇದರಿಂದಾಗಿ ದಾಖಲಾತಿ ಹೆಚ್ಚಳವಾಗುತ್ತಿದೆ ಎಂದು ಹೇಳಿದರು.

2025-26 ನೇ ಸಾಲಿನಲ್ಲಿ ಕೆಪಿಎಸ್ ಶಾಲೆಗಳು ಎಲ್‌ಕೆಜಿ ಯಿಂದ 12 ನೇ ತರಗತಿವರೆಗೆ ಒಂದೇ ಸೂರಿನಡಿಯಲ್ಲಿ ಗುಣಾತ್ಮಕ ಶಿಕ್ಷಣ ಲಭಿಸಲು ಕೆ.ಪಿಎಸ್ ಶಾಲೆಗಳನ್ನು ಪ್ರಾರಂಭಿಸಿದೆ ಕಲಬುರಗಿಯಲ್ಲಿ ಈ ಹಿಂದೆ 14 ಕೆ.ಪಿಎಸ್. ಶಾಲೆಗಳಿದ್ದು, ಈಗ ಕೆ.ಕೆ.ಆರ್.ಡಿ.ಬಿ. ಯೋಜನೆಗಳನ್ನು 53 ಕೆ.ಪಿಎಸ್. ಶಾಲೆಗಳು ಮಂಜೂರು ಮಾಡಲಾಗಿದೆ ಎಂದರು.

2025-26 ನೇ ಸಾಲಿನಲ್ಲಿ ಎಸ್.ಎಸ್.ಎಲ್.ಸಿ. ಫಲಿತಾಂಶ ಹೆಚ್ಚಳಕ್ಕೆ ಜಿಲ್ಲೆಯಲ್ಲಿ ಸಾಕಷ್ಟು ಕ್ರಮಗಳನ್ನು ಅನುಸರಿಸಲಾಗುತ್ತಿದೆ ಈ ನಿಟ್ಟಿನಲ್ಲಿ ಮಿಷನ್-40+ ನಿಂದಾಗಿ ಈ ವರ್ಷ ಫಲಿತಾಂಶ ಹೆಚ್ಚಳವಾಗುವ ನಿರೀಕ್ಷೆ ಇದೆ ಎಂದು ಹೇಳಿದರು.

ರಾಜ್ಯದಲ್ಲಿ ಶಿಕ್ಷಣ ಸಲುವಾಗಿ 46000 ಕೋಟಿ ಅನುದಾನ ಖರ್ಚು ಮಾಡಲಾಗುತ್ತಿದ್ದು, ಎಸ್.ಎಸ್.ಎಲ್. ಪರೀಕ್ಷೆಯಲ್ಲಿ ಈ ವರ್ಷ ಹೆಚ್ಚಿನ ವಿದ್ಯಾರ್ಥಿಗಳು ಹೆಚ್ಚಿನ ಫಲಿತಾಂಶ ಬರಬೇಕು ಅಧಿಕಾರಿಗಳು ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ನೀಡಬೇಕು ಯಾವುದೇ ವಿದ್ಯಾರ್ಥಿಗಳು ಅನ್ಯಾಯ ಆಗ ಕೂಡದು ಎಂದು ತಿಳಿಸಿದರು.

ಪ್ರವೇಶಾತಿ ಸಂಬಂಧಿಸಿದಂತೆ ಜಿಪಂ ಸಿ.ಇ.ಓ. ಅಧ್ಯಕ್ಷತೆಯಲ್ಲಿ ಸಭೆ ನಡೆಸಿ, ಮಕ್ಕಳ ದಾಖಲಾತಿಗೆ ಇರುವ ಸಮಸ್ಯೆಗಳನ್ನು ಚರ್ಚಿಸಿ, ಅವುಗಳನ್ನು ಬಗೆಹರಿಸಿ ಮಕ್ಕಳು ಶಾಲೆಗಳಿಗೆ ದಾಖಲಾಗಲು ಕ್ರಮವಹಿಸಬೇಕು. ಜಿಲ್ಲೆಯಲ್ಲಿ ಅತಿಥಿ ಶಿಕ್ಷಕರನ್ನು ನೇಮಿಸಿಕೊಂಡು ಉತ್ತಮ ಫಲಿತಾಂಶಕ್ಕೆ ಒತ್ತು ನೀಡಬೇಕು. ಜಿಲ್ಲೆಗೆ ಇನ್ನು ಹೆಚ್ಚಿನ ಫಲಿತಾಂಶ ತರಲು ಡಿ.ಸಿ. ಮತ್ತು ಸಿ.ಇ.ಓ. ವಿಶೇಷ ತರಗತಿ ಏರ್ಪಡಿಸಿ ವಿದ್ಯಾರ್ಥಿಗಳಿಗೆ ಅರಿವು ಮೂಡಿಸಬೇಕು ಎಂದರು.

ಅವಶ್ಯವಿರುವ ಸರ್ಕಾರಿ ಶಾಲೆಗಳಿಗೆ ಸ್ಮಾರ್ಟ್ ಕ್ಲಾಸ್ ರೂಂ ಗಳನ್ನು ಕಲ್ಪಿಸಬೇಕು. ಕ್ಷೇತ್ರ ಶಿಕ್ಷಣಾಧಿಕಾರಿಗಳು ತಮ್ಮ ವ್ಯಾಪ್ತಿಯ ಸರ್ಕಾರಿ ಶಾಲೆಗಳಿಗೆ ಕಡ್ಡಾಯವಾಗಿ ಭೇಟಿನೀಡಿ ಅಲ್ಲಿನ ವಸ್ತುಸ್ಥಿತಿ ಅರಿತು ಕ್ರಮ ಕೈಗೊಳ್ಳಬೇಕು.

ಅಧಿಕಾರಿಗಳು ಸರ್ಕಾರಿ ಶಾಲೆಗಳ ಬಗ್ಗೆ ಹೆಚ್ಚು ಕಾಳಜಿವಹಿಸಿ ಶಾಲೆಗಳನ್ನು ಅಭಿವೃದ್ಧಿ ಪಡಿಸಬೇಕು ಎಂದರು.

ಪೋಷಕರು ಶಿಕ್ಷಕರ ಸಭೆಗಳಿಂದಾಗಿ ಪೋಷಕರಲ್ಲಿ ತಮ್ಮ ಮಕ್ಕಳ ಕಲಿಕೆ ಮತ್ತು ಶಾಲೆಗಳ ಬಗ್ಗೆ ಗಮನ ಹರಿಸಬೇಕು ಪಿ.ಯು.ಸಿ. ದಾಖಲಾತಿ ಮತ್ತು ಫಲಿತಾಂಶ ಕಡಿಮೆಯಾ ಗುತ್ತಿದ್ದು, ಫಲಿತಾಂಶ ಮತ್ತು ದಾಖಲಾತಿ ಹೆಚ್ಚಿಸಲು ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಕ್ರಮಕೈಗೊಳ್ಳಬೇಕೆಂದು ಅವರು ತಿಳಿಸಿದರು.

ಓಇಇಖಿ ಎಇಇ ಕೋರ್ಸ ಗಳನ್ನು ಪದವಿ ಪೂರ್ವ ಕಾಲೇಜುಗಳಲ್ಲಿ ತರಬೇತಿ ಪ್ರಾರಂಭಸಲಾಗಿದ್ದು, ಅವುಗಳ ಉಪಯೋಗವನ್ನು ಹೆಚ್ಚಿನ ವಿದ್ಯಾರ್ಥಿಗಳು ಪಡೆ ಯುವಂತಾಗಬೇಕು ಎಂದರು.

ಇದೇ ಸಂದರ್ಭದಲ್ಲಿ ಶಾಲಾ ಶಿಕ್ಷಣ ಇಲಾಖೆಯ ಆಪರ ಆಯುಕ್ತ ರಾಹುಲ ತುಕರಾಮ ಪಾಂಡ್ವೆ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ಭಂವಾರ ಸಿಂಗ್ ಮೀನಾ, ಶಾಲಾ ಶಿಕ್ಷಣ ಇಲಾ ಖೆಯ ಪ್ರಭಾರ ಉಪನಿರ್ದೇಶಕಿ ಶಂಕ್ರಮ್ಮ ಡವಳಗಿ, ಶಾಲಾ ಶಿಕ್ಷಣ ಇಲಾಖೆ ಪದವಿ ಪೂರ್ವ ಕಾಲೇಜಿನ ಉಪನಿರ್ದೇಶಕರು, ತಾಲೂಕಿನ ಕ್ಷೇತ್ರಶಿಕ್ಷಣಾಧಿಕಾಗಿಗಳು ಶಾಲಾ ಕಾಲೇಜಿನ ಪ್ರಾಂಶುಪಾಲರು ಸೇರಿದಂತೆ ಅಧಿಕಾರಿಗಳು ಇದ್ದರು.

ಕೇಂದ್ರೀಯ ವಿ.ವಿ ಯಲ್ಲಿ ಯು.ಜಿ.ಕೋರ್ಸ್‌ಗೆ ಅರ್ಜಿ ಆಹ್ವಾನ ಕಲ್ಯಾಣ ಕರ್ನಾಟಕ ಅಭ್ಯರ್ಥಿಗಳಿಗೆ 8 ರಷ್ಟು ಮೀಸಲಾತಿ-ಕುಲಪತಿ



ಕಲಬುರಗಿ,ಜ.08-

ಕರ್ನಾಟಕ ಕೇಂದ್ರೀಯ ವಿಶ್ವ ವಿದ್ಯಾಲಯದಲ್ಲಿ 2026 ನೇ ಶೈಕ್ಷಣಿಕ ಸಾಲಿನಲ್ಲಿ ವಿವಿಧ ಸ್ನಾತಕೋತ್ತರ ಕೋರ್ಸ್ ಒಳಗೊಂಡಂತೆ 15 ಸ್ನಾತಕೋತ್ತರ ಕೋರ್ಸ್‌ಗಳಿಗೆ ಪ್ರವೇಶಾತಿ ಪ್ರಕ್ರಿಯೆ ಆರಂಭ ವಾಗಿ ದ್ದು ಕಲ್ಯಾಣ ಕರ್ನಾಟಕ ಭಾಗದ ಅಭ್ಯರ್ಥಿಗಳಿಗೆ ಶೇಕಡ 8 ರಷ್ಟು ಮೀಸಲಾತಿ ನೀಡಲಾಗುವುದು ಎಂದು ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಬಟ್ಟು ಸತ್ಯನಾರಾಯಣ ಹೇಳಿದ್ದಾರೆ.

ಕೇಂದ್ರೀಯ ವಿಶ್ವವಿದ್ಯಾಲಯದ ಅತಿಥಿಗೃಹದಲ್ಲಿ ಸುದ್ದಿಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದ ಅವರು, ಇದೇ ಜನವರಿ 3 ರಂದು ಕ್ರೆಡಿಟ್/ ಡೆಬಿಟ್ ಕಾರ್ಡ/ ನೆಟ್-ಬ್ಯಾಂಕಿಂಗ್/ಯುಪಿಐ ಮೂಲಕ ಯಶಸ್ವಿಯಾಗಿ ಪಾವತಿಸಬೇಕು. ಜನವರಿ 2026 ರ 31 ಆನ್‌ಲೈನ್ ಮೂಲಕವೇ ಶುಲ್ಕ ಪಾವತಿಸಲು ಕೊನೆ ದಿನವಾಗಿದೆ. ಫೆಬ್ರುವರಿ 2 ರಿಂದ ಫೆಬ್ರುವರಿ 4ರ ರಾತ್ರಿ 11.50 ಗಂಟೆಯವರೆಗೆ ಅರ್ಜಿಯಲ್ಲಿ ಏನಾದರೂ ತಿದ್ದುಪಡಿ ಮಾಡಲು ಅವಕಾಶ ಕಲ್ಪಿಸಲಾಗಿದೆ. ಎಂದರು ತಿಳಿಸಿದರು.

ಸ್ನಾತಕೋತ್ತರ ಕೋರ್ಸಗಳ ಪರೀಕ್ಷೆ ಯೋಜನೆ ಅರ್ಹತೆ ಇತರೆ ಮಾಹಿತಿಗಾಗಿ ಅಭ್ಯರ್ಥಿಗಳು ಎನ್.ಟಿ.ಎ(ನ್ಯಾಷನಲ್ ಟೆಸ್ಟಿಂಗ್ ಏಜೆನ್ಸಿ) ವೆಬ್ ಸೈಟ್ CUET (UG) -2026(https:// cuet.nta.nic.in/) ನಲ್ಲಿ ಪರೀಕ್ಷೆ ನಡೆಯುವ ಸ್ಥಳ, ದಿನಾಂಕ, ಪ್ರವೇಶ ಕಾರ್ಡ್, ಫಲಿತಾಂಶ ಎಲ್ಲವು ತಿಳಿಸಲಾಗುತ್ತದೆ. ಅಭ್ಯರ್ಥಿಗಳು ಕ್ರಿಯಾಶೀಲವಾಗಿ ವೀಕ್ಷಿಸಬೇಕು ಮತ್ತು ವೆಬ್ ಸೈಟ್ ನಲ್ಲಿ ಮಾತ್ರ ಅರ್ಜಿ ಸಲ್ಲಿಸಬಹುದು ಬೇರೆ ಯಾವು ದೇ ವಿಧಾನದಲ್ಲಿ ಅರ್ಜಿ ಸ್ವೀಕರಿ ಸುವುದಿಲ್ಲ ಎಂದು ಕುಲಪತಿಗಳು ಮಾಹಿತಿ ತಿಳಿಸಿದರು.

ಪಿಯುಸಿ ಪರೀಕ್ಷೆ ಬರೆಯುತ್ತಿರುವಂತ ಅಭ್ಯರ್ಥಿಗಳು ಕೂಡ ಅಪ್ಲಿಕೇಶನ್ ಹಾಕಿ ಪ್ರವೇಶಾತಿ ಪರೀಕ್ಷೆ ಬರೆಯಲು ಅವಕಾಶ ಮಾಡಿಕೊ ಡಲಾಗುವುದು. ಮೇ ತಿಂಗಳಲ್ಲಿ ಪ್ರವೇಶಾತಿ ಪ್ರಕ್ರಿಯೆ ನಡೆಯಲಿದೆ. ಹೀಗಾಗಿ ಎನ್.ಎ.ಟಿ. ನಡೆಸುವ ಪ್ರವೇಶ ಪರೀಕ್ಷೆ ಬರೆಯಬಹು ದಾಗಿದೆ ಎಂದು ಅವರು ತಿಳಿಸಿದರು.

ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದ ಸ್ನಾತಕೋತ್ತರ ಕೋರ್ಸಗಳಾದ ಬಿ.ಟೆಕ್ ಎಲೆಕ್ಟಿಕಲ್ ಇಂಜಿನಿಯರಿಂಗ್, ಬಿ ಟೆಕ್ ಎಲೆಕ್ಟ್ರಾನಿಕ್ ಮತ್ತು ಕಮ್ಯುನಿಕೇಶನ್ ಇಂಜಿನಿಯರಿಂಗ್,(ಆರ್ಟಿಫಿಷಿಯಲ್ ಇಂಟಲಿಜನ್ಸ್ ಅಂಡ್ ಮಷೀನ್ ಲರ್ನಿಂಗ್) ಬಿ.ಟೆಕ್ ಗಣಿತ ಮತ್ತು ಕಂಪ್ಯೂಟಿಂಗ, ಬಿ.ಟೆಕ್ ಕಂಪ್ಯೂಟರ್ ಸೈನ್ಸ್, ಬಿ.ಎಸ್ಸಿ ಭೌತಶಾಸ್ತ್ರ, ಬಿ.ಎಸ್ಸಿ ರಾಸಾಯನಶಾಸ್ತ್ರ, ಬಿ.ಎಸ್ಸಿ ಭೂ ವಿಜ್ಞಾನ, ಬಿ.ಎಸ್ಸಿ ಮನೋವಿಜ್ಞಾನ, ಬಿಬಿಎ, ಸಮಾಜ ಕಾರ್ಯದಲ್ಲಿ ಪದವಿ (ಬಿ ಎಸ್ ಡಬ್ಲ್ಯೂ), ಬಿ.ಎ ಅರ್ಥಶಾಸ್ತ್ರ, ಬಿ.ಎ ಇತಿಹಾಸ, ಬಿ.ಎ ಇಂಗ್ಲಿಷ್ ,ಬಿ.ಎ ಎಲ್ ಎಲ್ ಬಿ (ಐದು ವರ್ಷದ ಇಂಟಿಗ್ರೇಟೆಡ್ ಪ್ರೋಗ್ರಾಮ್) (ಆನರ್ಸ್) CUET (UG) ಅನ್ನು 13 ಭಾರತೀಯ ಭಾಷೆಗಳಲ್ಲಿ ನಡೆಸಲಾಗುವುದು. ಕಂಪ್ಯೂಟರ್ ಆಧಾರಿತ ಪರೀಕ್ಷೆ ನಡೆಸಲಾಗುತ್ತದೆ, 13 ಭಾರತೀಯ ಭಾಷೆಯಲ್ಲಿ (ಇಂಗ್ಲಿಷ್, ಹಿಂದಿ, ಬಂಗಾಳಿ, ಗುಜರಾತಿ, ಕನ್ನಡ, ಮಲಯಾಳಂ, ಮರಾಠಿ, ಒಡಿಯಾ, ಪಂಜಾಬಿ, ತಮಿಳು, ತೆಲುಗು, ಮತ್ತು ಉರ್ದು) ನಡೆಸಲಾಗುವುದು ಎಂದರು.

ಅರ್ಜಿ ಸಲ್ಲಿಸುವಲ್ಲಿ ಅಭ್ಯರ್ಥಿಗಳಿಗೆ ತೊಂದರೆ ಎದುರಾದರೆ 011-40759000 ಸಂಪರ್ಕಿಸಿ ಅಭ್ಯರ್ಥಿಗಳು CUET (UG) ಗೆ '' ಆನ್ ಲೈನ್ ಮೂಲಕ (https/ cuet-ug@nta.ac.in) ವೆಬ್‌ಸೈಟ್‌ನಲ್ಲಿ ಅರ್ಜಿ ಅರ್ಜಿ ಸಲ್ಲಿಸ ಬಹುದು. ಕರ್ನಾಟಕದ 15 ಸ್ಥಳಗಳಲ್ಲಿ ಪ್ರವೇಶ ಪರೀಕ್ಷೆ ಬರೆಯ ಬಹುದಾಗಿದೆ. ಬೆಳಗಾವಿ, ಬಳ್ಳಾರಿ, ಕಲಬುರಗಿ, ಬೆಂಗಳೂರು, ಬೀದರ್, ದಾವಣಗೆರೆ, ಹಾಸನ್, ಹುಬ್ಬಳ್ಳಿ, ಮಂಗಳೂರು, ಮೈಸೂರು, ಶಿವ ಮೊಗ್ಗ, ತುಮಕೂರು, ಉಡುಪಿ, ಧಾರವಾಡ ಮತ್ತು ಮಂಗಳೂರು.

ಸುದ್ದಿಗೋಷ್ಠಿಯಲ್ಲಿ ಕುಲಸಚಿವ ಪ್ರೊ. ಆರ್.ಆರ್. ಬಿರಾದಾರ ಅವರು ಸಿಯುಕೆ ಶೈಕ್ಷಣಿಕ ಸಾಧನೆ ಮತ್ತು ಪ್ರಗತಿಯ ಬಗ್ಗೆ ವಿವರಣೆ ನೀಡಿದರು. ಪರೀಕ್ಷಾ ನಿಯಂತ್ರಣಾಧಿಕಾರಿ ಕೋಟಾಸಾಯಿ ಕೃಷ್ಣಾ, ಪ್ರೊ. ಹನುಮೇಗೌಡ, ಪ್ರೊ. ಹೆಗಡೆ, ಸಹಾಯಕ ಸಂಪರ್ಕಾಧಿಕಾರಿ ಪ್ರಕಾಶ ಬಾಳಿಕಾಯಿ, ಇತರರು ಇದ್ದರು.

ನಿಮ್ಮೂರು ಸುದ್ದಿ

ಸಂಪಾದಕೀಯ

ಎಸ್‌ಐಆರ್: ವಿದೇಶಿಯರನ್ನು ಹೊರ ಹಾಕುವುದೇ ಉದ್ದೇಶ ಎಂದ ಚುನಾವಣಾ ಆಯೋಗ: 6 ಕೋಟಿ ಮಂದಿ ಬೇರೆ ದೇಶದವರೆನ್ನುವುದೇ?



ಇತ್ತೀಚೆಗೆ ನಡೆದ ಸುಪ್ರೀಂ ಕೋರ್ಟ್ ವಿಚಾರಣೆ ವೇಳೆ ಚುನಾವಣಾ ಆಯೋಗ ಪರೋಕ್ಷವಾಗಿ ಎಸ್‌ಐಆರ್‌ನ ಉದ್ದೇಶ ಏನು ಎಂಬುದನ್ನು ಬಹಿರಂಗಪಡಿಸಿದೆ. ದೇಶದಲ್ಲಿ ಪರೋಕ್ಷವಾಗಿ ಪೌರತ್ವ ತಿದ್ದುಪಡಿ ಕಾಯ್ದೆ (ಸಿಎಎ) ಮತ್ತು ರಾಷ್ಟ್ರೀಯ ನಾಗರಿಕರ ನೋಂದಣಿ(ಎನ್‌ಆರ್‌ಸಿ) ಕಾರ್ಯವನ್ನು ಚುನಾವಣಾ ಆಯೋಗವು ಎಸ್‌ಐರ್ಆ ಮೂಲಕ ಜಾರಿ ಮಾಡುತ್ತಿರುವಂತಿದೆ.

ಬಿಹಾರದಲ್ಲಿ ಚುನಾವಣೆಗೂ ಮುನ್ನ ತರಾತುರಿಯಲ್ಲಿ ಮತದಾರರ ಪಟ್ಟಿ ವಿಶೇಷ ತೀವ್ರ ಪರಿಷ್ಕರಣೆ (ಎಸ್‌ಐಆ)ರ್ ನಡೆಸಲಾಗಿದ್ದು, ಬರೋಬ್ಬರಿ 65 ಲಕ್ಷ ಮಂದಿಯ ಹೆಸರನ್ನು ಚುನಾವಣಾ ಆಯೋಗ ಮತದಾರರ ಪಟ್ಟಿಯಿಂದ ತೆಗೆದುಹಾಕಿದೆ. ಇದಾದ ಬಳಿಕ ನಡೆದ ವಿಧಾನಸಭೆ ಚುನಾವಣೆಯಲ್ಲಿ ನಡೆದಿದ್ದೇನು ಎಂಬುದು ಎಲ್ಲರಿಗೂ ತಿಳಿದಿರುವುದು. ಬಿಹಾರದ ಬಳಿಕ ಇಸಿಐ ಮತ್ತೆ ಬಿಎಲ್‌ಒಗಳಿಗೆ ಒತ್ತಡ ಹೇರಿ, ವಿರೋಧಗಳ ನಡುವೆಯೂ 12 ರಾಜ್ಯಗಳಲ್ಲಿ ಎಸ್‌ಐಆರ್ ಪ್ರಕ್ರಿಯೆ ನಡೆಸುತ್ತಿದೆ. ಅಷ್ಟು ಮಾತ್ರವಲ್ಲದೆ ವಿದೇಶಿಯರನ್ನು ಹೊರ ಹಾಕುವುದೇ ಎಸ್‌ಐಆರ್‌ನ ಉದ್ದೇಶ ಎಂದು ಹೇಳಿಕೊಳ್ಳುವ ಮೂಲಕವೇ ಪರೋಕ್ಷವಾಗಿ , ಜಾರಿ ಮಾಡಲಾಗುತ್ತಿದೆ ಎಂಬುದನ್ನು ಒಪ್ಪಿಕೊಂಡಂತಿದೆ!

ಬಿಹಾರದಲ್ಲಿ ಜೂನ್-ಜುಲೈ ಅವಧಿಯಲ್ಲಿ ಎಸ್‌ಐರ್ಆ ಪ್ರಕ್ರಿಯೆ ನಡೆಸಲಾಗಿದೆ. ಈ ಪ್ರಕ್ರಿಯೆ ಆರಂಭದಲ್ಲೇ ವಿಪಕ್ಷಗಳು ತೀವ್ರ ಆಕ್ರೋಶ ವ್ಯಕ್ತಪಡಿಸಿತ್ತು. ಆರಂಭದಲ್ಲಿ ಚುನಾವಣೆಗೂ ಮುನ್ನ ತರಾತುರಿಯಲ್ಲಿ ಈ ಪ್ರಕ್ರಿಯೆ ನಡೆಸುವುದು ಹಲವು ಅನುಮಾನಗಳಿಗೆ ಎಡೆಮಾಡಿಕೊಟ್ಟಿತ್ತು. ಅಷ್ಟು ಮಾತ್ರವಲ್ಲದೆ ಸಾಮಾನ್ಯವಾಗಿ ಗ್ರಾಮೀಣ ಭಾಗದ ಜನರಲ್ಲಿ ಇರದ ದಾಖಲೆಗಳನ್ನೇ ಪ್ರಕ್ರಿಯೆಗೆ ಅಗತ್ಯವಾದ ದಾಖಲೆಗಳನ್ನಾಗಿಸಿದ್ದು ತೀವ್ರ ವಿರೋಧಕ್ಕೆ ಕಾರಣವಾಗಿದೆ. ಆದರೆ ಉಳಿದೆಲ್ಲೆಡೆ ಆಧಾರ್ ಲಿಂಕ್ ಮಾಡಲು ಹೇಳುವಾಗ ಆಧಾರ್ ಅನ್ನು ಪೌರತ್ವ ದಾಖಲೆಯನ್ನಾಗಿ ಪರಿಗಣಿಸದೆ ಇರುವುದೂ ಗೊಂದಲಕ್ಕೆ ಕಾರಣವಾಗಿದೆ.

ಇವೆಲ್ಲವುದರ ನಡುವೆ ಈ ಪ್ರಕ್ರಿಯೆ ವಿರುದ್ಧ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ವಿಚಾರಣೆಯೂ ನಡೆಯುತ್ತಿದೆ. ಇತ್ತೀಚೆಗೆ ನಡೆದ ಸುಪ್ರೀಂ ಕೋರ್ಟ್ ವಿಚಾರಣೆ ವೇಳೆ ಚುನಾವಣಾ ಆಯೋಗ ಪರೋಕ್ಷವಾಗಿ ಎಸ್‌ಐಆರ್‌ನ ಉದ್ದೇಶ ಏನು ಎಂಬುದನ್ನು ಬಹಿರಂಗಪಡಿಸಿದೆ. ದೇಶದಲ್ಲಿ ಪರೋಕ್ಷವಾಗಿ ಪೌರತ್ವ ತಿದ್ದುಪಡಿ ಕಾಯ್ದೆ (ಸಿಎಎ) ಮತ್ತು ರಾಷ್ಟ್ರೀಯ ನಾಗರಿಕರ ನೋಂದಣಿ(ಎನ್‌ಆರ್‌ಸಿ) ಕಾರ್ಯವನ್ನು ಚುನಾವಣಾ ಆಯೋಗವು ಎಸ್‌ಐರ್ಆ ಮೂಲಕ ಜಾರಿ ಮಾಡುತ್ತಿರುವಂತಿದೆ. ಇದಕ್ಕೆ ಪುಷ್ಠಿ ನೀಡುವಂತಿದೆ ಸುಪ್ರೀಂ ಕೋರ್ಟ್‌ನಲ್ಲಿ ಆಯೋಗದ ವಕೀಲರು ನೀಡಿರುವ ಹೇಳಿಕೆ!


ಇತ್ತೀಚೆಗೆ ನಡೆದ ಸುಪ್ರೀಂ ಕೋರ್ಟ್ ವಿಚಾರಣೆಯಲ್ಲಿ ಚುನಾವಣಾ ಆಯೋಗದ ಪರ ವಕೀಲರು, ಮತದಾರರ ಪಟ್ಟಿಯಲ್ಲಿ ಒಬ್ಬನೇ ಒಬ್ಬ ವಿದೇಶಿ ಪ್ರಜೆ ಇರದಂತೆ ನೋಡಿಕೊಳ್ಳುವುದು ಸಂವಿಧಾನದ ಅಡಿಯಲ್ಲಿ ಆಯೋಗದ ಹೊಣೆಗಾರಿಕೆಯಾಗಿದೆ ಎಂದು ವಾದಿಸಿದ್ದಾರೆ. ಅಷ್ಟು ಮಾತ್ರವಲ್ಲದೆ ಮತದಾರರ ಪಟ್ಟಿಗೆ ಸೇರಿಸುವ ಮೊದಲು ಆ ವ್ಯಕ್ತಿಯ ಪೌರತ್ವವನ್ನು ಪರಿಶೀಲಿಸುವ ಅಧಿಕಾರ ಆಯೋಗಕ್ಕಿದೆ ಎಂದು ಸ್ಪಷ್ಟಪಡಿಸಿದೆ. ವಿದೇಶಿಗರು ಮತದಾನ ಮಾಡಬಾರದು ಎಂಬುದು ಸರಿ. ಆದರೆ, ಸರಿಯಾದ ದಾಖಲೆ ಹೊಂದಿರದ ಬಡ ಅರ್ಹ ಮತದಾರರ ಹಕ್ಕನ್ನು ಕಸಿಯಲಾಗುತ್ತಿರುವ ಬಗ್ಗೆ ಚುನಾವಣಾ ಆಯೋಗ ಹೇಳುವುದೇನು? ಜತೆಗೆ ವಿಪಕ್ಷಗಳು ಸಾಕ್ಷಿ ಸಮೇತವಾಗಿ ಮಾಡುತ್ತಿರುವ ಮತಗಳ್ಳತನ ಆರೋಪವನ್ನು ಚುನಾವಣಾ ಆಯೋಗ ಗಂಭೀರವಾಗಿ ಪರಿಗಣಿಸುವುದು ಯಾವಾಗ?

ಈವರೆಗೆ ಎಷ್ಟು ಮಂದಿಯ ಹೆಸರು ಡಿಲೀಟ್? ಬಿಹಾರದಲ್ಲಿ ಎಸ್‌ಐರ್ಆ ಪ್ರಕ್ರಿಯೆಯನ್ನು ಈಗಾಗಲೇ ನಡೆಸಲಾಗಿದ್ದು 65 ಲಕ್ಷ ಮತದಾರರ ಹೆಸರನ್ನು ಪಟ್ಟಿಯಿಂದ ತೆಗೆದುಹಾಕಲಾಗಿದೆ. ಬಿಹಾರದ ಬಳಿಕ ಒಟ್ಟು 12 ರಾಜ್ಯ, ಕೇಂದ್ರಾಡಳಿತ ಪ್ರದೇಶಗಳಲ್ಲಿ ಎಸ್‌ಐರ್ಆ ಪ್ರಕ್ರಿಯೆ ನಡೆಸಲಾಗುತ್ತಿದೆ. ಕರ್ನಾಟಕದಲ್ಲಿ ಪೂರ್ವಸಿದ್ಧತಾ ಕಾರ್ಯಗಳು ಈಗಾಗಲೇ ಆರಂಭವಾಗಿವೆ. ತಮಿಳುನಾಡು, ಕೇರಳ, ಪಶ್ಚಿಮ ಬಂಗಾಳ, ಪುದುಚೇರಿಯಲ್ಲಿ ಮೊದಲ ಹಂತದ ಪ್ರಕ್ರಿಯೆ ಚಾಲನೆಯಲ್ಲಿದೆ. ಉತ್ತರ ಪ್ರದೇಶ, ಗುಜರಾತ್, ರಾಜಸ್ಥಾನ, ಮಧ್ಯಪ್ರದೇಶ, ಛತ್ತೀಸ್‌ಗಢ, ಗೋವಾ, ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳು, ಲಕ್ಷದ್ವೀಪದಲ್ಲಿ ಎರಡು ಹಂತದ ಪ್ರಕ್ರಿಯೆ ನಡೆಯುತ್ತಿದೆ.

ತಮಿಳುನಾಡಿನಲ್ಲಿ 97.37 ಲಕ್ಷ, ಕೇರಳದಲ್ಲಿ 24.08 ಲಕ್ಷ, 58.20 ಲಕ್ಷ, ಪುದುಚೇರಿಯಲ್ಲಿ 1.03 ಲಕ್ಷ, ಉತ್ತರ ಪ್ರದೇಶದಲ್ಲಿ 2.89 ಕೋಟಿ, ಗುಜರಾತ್‌ನಲ್ಲಿ 73.73 ಲಕ್ಷ, ರಾಜಸ್ಥಾನದಲ್ಲಿ 41.85 ಲಕ್ಷ, ಮಧ್ಯಪ್ರದೇಶದಲ್ಲಿ 42.74 ಲಕ್ಷ, ಛತ್ತೀಸ್‌ಗಢದಲ್ಲಿ 27.34 ಲಕ್ಷ, ಗೋವಾದಲ್ಲಿ 1 ಲಕ್ಷ, ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳಲ್ಲಿ 64 ಸಾವಿರ, ಲಕ್ಷದ್ವೀಪದಲ್ಲಿ 1,429 ಹೆಸರುಗಳನ್ನು ಮತದಾರರ ಪಟ್ಟಿಯಿಂದ ಡಿಲೀಟ್ ಮಾಡಲಾಗಿದೆ. ಒಟ್ಟಾರೆಯಾಗಿ 6.5 ಕೋಟಿ ಮತದಾರರ ಹೆಸರನ್ನು ಕೈಬಿಡಲಾಗಿದೆ.

ಮತದಾರರ ಪಟ್ಟಿಯಿಂದ ವಿದೇಶಿಯರನ್ನು ಹೊರಹಾಕುವುದೇ ಎಸ್‌ಐರ್ಆ ನಡೆಸುತ್ತಿರುವುದರ ಹಿಂದಿನ ಉದ್ದೇಶ ಎಂದು ಚುನಾವಣಾ ಆಯೋಗ ಹೇಳುವುದಾದರೆ 6.5 ಕೋಟಿ ಮಂದಿ ವಿದೇಶಿಗರು ಎಂದು ಆಯೋಗ ಹೇಳುವುದೇ? ಅಷ್ಟಕ್ಕೂ ಪೌರತ್ವ ಪರೀಕ್ಷೆ ಮಾಡುವುದು ಚುನಾವಣಾ ಆಯೋಗದ ಕರ್ತವ್ಯವೇ? ಮತದಾನ ಮಾಡಲು ಅರ್ಹರೇ ಎಂದು ನೋಡುವುದು, ನಕಲಿ ಮತದಾರರನ್ನು ತೆಗೆದುಹಾಕುವುದಷ್ಟೇ ಚುನಾವಣಾ ಆಯೋಗದ ಕರ್ತವ್ಯವಲ್ಲವೇ? ಕೋಟ್ಯಾಂತರ ಮಂದಿಯ ಮತಾಧಿಕಾರವನ್ನು ಕಿತ್ತುಕೊಂಡು ಸಂವಿಧಾನ ಚುನಾವಣಾ ಆಯೋಗಕ್ಕೆ ನೀಡುವ ಹಕ್ಕಿನ ಬಗ್ಗೆ ಮಾತನಾಡುವುದು ಎಷ್ಟು ಸರಿ?

ವಿದ್ಯಾರ್ಥಿನಿಯರಿಗೆ ಮುಟ್ಟಿನ ಕಪ್: ತಪ್ಪು ಕಲ್ಪನೆ ಬಿಡಿ; ಹೆಣ್ಣುಮಕ್ಕಳಿಗೆ ಬಳಕೆ ತರಬೇತಿ ನೀಡಿ



ಕೆಲವು ವರ್ಷಗಳ ಹಿಂದೆ ಮುಟ್ಟಿನ ಕಪ್ ಬಳಸುವ ಯುವತಿಯರೆಡೆ ನೋಡುವ ದೃಷ್ಟಿಯೇ ಬೇರೆಯಾಗಿತ್ತು. ಇದು ಸ್ವತಃ ನಾನು ಬಳಸಿದಾಗಲೂ ಅನುಭವಕ್ಕೆ ಬಂದಿರುವುದು. ಹೋ ನೀನು ಮುಟ್ಟಿನ ಕಪ್ ಬಳಸುತ್ತೀಯಾ? ಆದರೆ ಅದು ಲೈಂಗಿಕವಾಗಿ ಸಕ್ರಿಯವಾಗಿದ್ದವರಿಗೆ ಮಾತ್ರ, ಬಳಸಲು ಸಾಧ್ಯವಲ್ಲವೆ ಎಂಬ ತಪ್ಪು ಕಲ್ಪನೆಗಳನ್ನು ಒಳಗೊಂಡ ಯುವತಿಯರ ಪ್ರಶ್ನೆಗೆ ವೈಜ್ಞಾನಿಕವಾಗಿ ಉತ್ತರಿಸಬೇಕಾಗಿತ್ತು.

ಮುಟ್ಟಿನ ಕಪ್ ಸದ್ಯ ಮತ್ತೆ ಚರ್ಚೆಯ ವಿಷಯವಾಗಿದೆ. ಅದಕ್ಕೆ ಕಾರಣ ಸರ್ಕಾರದ ಹೊಸ ಯೋಜನೆ. ರಾಜ್ಯ ಸರ್ಕಾರವು ಶಾಲಾ-ಕಾಲೇಜು ವಿದ್ಯಾರ್ಥಿನಿಯರಿಗೆ ಮುಟ್ಟಿನ ಕಪ್ ಒದಗಿಸುವ ಯೋಜನೆಯೊಂದನ್ನು ಪ್ರಾಯೋಗಿಕವಾಗಿ ಆರಂಭಿಸಲು ನಿರ್ಧರಿಸಿದೆ. ಆರಂಭದಲ್ಲಿ ಆಯ್ದ ಜಿಲ್ಲೆಗಳಲ್ಲಿ ವಿದ್ಯಾರ್ಥಿನಿಯರಿಗೆ ಮುಟ್ಟಿನ ಕಪ್ ನೀಡಿ ಬಳಿಕ ವಿಸ್ತರಿಸಲು ಸರ್ಕಾರ ಮುಂದಾಗಿದೆ. ಸದ್ಯ ಸ್ವಚ್ಛ ಭಾರತ ಅಭಿಯಾನದ ಅಡಿಯಲ್ಲಿ ರಾಜ್ಯ ವೈದ್ಯಕೀಯ ಸರಬರಾಜು ನಿಗಮ ಲಿಮಿಟೆಡ್ (ಕೆಎಸ್‌ಎಂಎಸ್‌ಸಿಎಲ್) ಮೂಲಕ 61 ಕೋಟಿ ರೂಪಾಯಿಗಳಿಗೂ ಅಧಿಕ ವೆಚ್ಚದಲ್ಲಿ 10,38,912 ಮುಟ್ಟಿನ ಕಪ್ ನೀಡಲು ಸರ್ಕಾರ ಅನುಮೋದನೆ ನೀಡಿದೆ.

ಸರ್ಕಾರವು 6ರಿಂದ 8ನೇ ತರಗತಿಯ ವಿದ್ಯಾರ್ಥಿನಿಯರಿಗೆ ಈ ಹಿಂದಿನಂತೆ ಸ್ಯಾನಿಟರಿ ಪ್ಯಾಡ್‌ಗಳ ವಿತರಣೆ ಮಾಡಲಿದೆ. 9 ರಿಂದ 12 ನೇ ತರಗತಿಯ ಹಿರಿಯ ವಿದ್ಯಾರ್ಥಿನಿಯರಿಗೆ ಮುಂದಿನ ಶೈಕ್ಷಣಿಕ ವರ್ಷದಿಂದ ಮುಟ್ಟಿನ ಕಪ್‌ಗಳನ್ನು ನೀಡಲಾಗುತ್ತದೆ. ಪ್ರಸ್ತುತ ಆರ್ಥಿಕ ವರ್ಷದ ಬಾಕಿ ಉಳಿದ ತಿಂಗಳುಗಳಲ್ಲಿ ಸ್ಯಾನಿಟರಿ ಪ್ಯಾಡ್‌ಗಳನ್ನೇ ವಿತರಿಸಲು ಜಿಲ್ಲಾ ಮಟ್ಟದಲ್ಲಿ ಖರೀದಿಗೆ ಅನುಮೋದಿಸಲಾಗಿದೆ.

ಸರ್ಕಾರ ಮುಟ್ಟಿನ ಕಪ್ ನೀಡಲು ಮುಂದಾಗಿರುವುದು ಸ್ವಾಗತಾರ್ಹ. ಆದರೆ ಮಕ್ಕಳಿಗೆ ತರಬೇತಿ ನೀಡಲು ಸರ್ಕಾರ ಸಿದ್ಧತೆ ನಡೆಸಿದೆಯೇ? ತನ್ನ ದೇಹ ರಚನೆಯ ಬಗ್ಗೆಯೇ ಸರಿಯಾಗಿ ಅರಿವಿಲ್ಲದೆ ಮಕ್ಕಳಿಗೆ ಮುಟ್ಟಿನ ಕಪ್ ಬಳಕೆ ಬಗ್ಗೆ ತಿಳಿಸುವುದು ಮುಖ್ಯವಲ್ಲವೇ?

ಕೆಲವು ವರ್ಷಗಳ ಹಿಂದೆ ಮುಟ್ಟಿನ ಕಪ್ ಬಳಸುವ ಯುವತಿಯರೆಡೆ ನೋಡುವ ದೃಷ್ಟಿಯೇ ಬೇರೆಯಾಗಿತ್ತು. ಇದು ಸ್ವತಃ ನಾನು ಬಳಸಿದಾಗಲೂ ಅನುಭವಕ್ಕೆ ಬಂದಿರುವುದು. ''ಹೋ ನೀನು ಮುಟ್ಟಿನ ಕಪ್ ಬಳಸುತ್ತೀಯಾ? ಆದರೆ ಅದು ಲೈಂಗಿಕವಾಗಿ ಸಕ್ರಿಯವಾಗಿದ್ದವರಿಗೆ ಮಾತ್ರ, ಬಳಸಲು ಸಾಧ್ಯವಲ್ಲವೆ'' ಎಂಬ ತಪ್ಪು ಕಲ್ಪನೆಗಳನ್ನು ಒಳಗೊಂಡ ಯುವತಿಯರ ಪ್ರಶ್ನೆಗೆ ವೈಜ್ಞಾನಿಕವಾಗಿ ಉತ್ತರಿಸಬೇಕಾಗಿತ್ತು. ಈ ಪ್ರಶ್ನೆಗಳಿಗೆ ಉತ್ತರಿಸಬೇಕಲ್ಲ ಎಂಬ ಭಯದಿಂದಲೇ ಅದೆಷ್ಟೋ ಹೆಣ್ಣುಮಕ್ಕಳು ಮುಟ್ಟಿನ ಕಪ್‌ಗಳಿಂದ ದೂರ ಉಳಿದಿದ್ದೂ ಇದೆ. ಇದೀಗ ಆ ಮಿಥ್ಯಗಳಿಗೆ ತೆರೆಬೀಳುವಂತಹ ಯೋಜನೆ ಮುಟ್ಟಿನ ಕಪ್ ವಿತರಣೆ ಯೋಜನೆ. ವಿದ್ಯಾರ್ಥಿನಿಯರಿಗೆ ಈ ಮಿಥ್ಯಗಳ ಹಿಂದಿರುವ ಸತ್ಯಗಳನ್ನು ತಿಳಿಸಿ ಯೋಜನೆ ಮುಂದುವರೆಸಿದರೆ ಮಾತ್ರ ಯೋಜನೆ ಯಶಸ್ವಿಯಾದೀತು.

ಮಿಥ್ಯ 1: ಕನ್ಯತ್ವಕ್ಕೆ ಧಕ್ಕೆಯಾಗುತ್ತದೆ

ಸತ್ಯ: ಕನ್ಯತ್ವ ಎಂಬ ಕಲ್ಪನೆಯೇ ತಪ್ಪಾಗಿದ್ದು. ಹಲವರು ಈ ಕನ್ಯತ್ವ ಎಂದು ಭಾವಿಸುವ ಹೈಮೆನ್ ಯೋನಿಯ ದ್ವಾರವನ್ನು ಪೂರ್ಣವಾಗಿ ಮುಚ್ಚಿರುವ ಒಂದು ಪೊರೆ ಎಂದು ಭಾವಿಸುತ್ತಾರೆ. ಆದರೆ ವಾಸ್ತವದಲ್ಲಿ, ಅದು ಯೋನಿಯ ದ್ವಾರದ ಸುತ್ತಲಿರುವ ಒಂದು ತೆಳುವಾಗ ಅಂಗಾಂಶವಷ್ಟೇ. ಇದು ಮೊದಲ ಲೈಂಗಿಕ ಸಂಪರ್ಕದ ಸಮಯದಲ್ಲಿ ಹರಿಯುತ್ತದೆ ಎಂಬುದು ತಪ್ಪು ಕಲ್ಪನೆ. ಸೈಕ್ಲಿಂಗ್, ಈಜು, ಜಿಮ್ ಮಾಡುವಾಗ ಹೈಮೆನ್ ಸ್ವಲ್ಪ ಹಿಗ್ಗಬಹುದು ಅಥವಾ ಹರಿಯಬಹುದು. ಹಾಗೆಯೇ ಮುಟ್ಟಿನ ಕಪ್ ಬಳಸುವಾಗಲೂ ಹೈಮೆನ್ ಹಿಗ್ಗಬಹುದು ಅಥವಾ ಹರಿಯಬಹುದು. ಆದರೆ ಇದು ಕನ್ಯತ್ವವನ್ನು ಕಳೆದುಕೊಂಡಂತೆ ಅಲ್ಲ.

ಮಿಥ್ಯ 2: ಕಪ್ ಹೊಟ್ಟೆಯೊಳಗೆ ಹೋಗಿ ಕಾಣೆಯಾಗಬಹುದು

ಸತ್ಯ: ಯೋನಿ ಮಾರ್ಗವು ಗರ್ಭಕಂಠದ ಬಳಿ ಕೊನೆಗೊಳ್ಳುತ್ತದೆ. ಇದು ಸಣ್ಣ ದ್ವಾರವಾಗಿದ್ದು ಇದರ ಮೂಲಕ ಕಪ್ ಗರ್ಭಕೋಶದೊಳಗೆ ಹೋಗಲು ಸಾಧ್ಯವಿಲ್ಲ. ಹೊಟ್ಟೆಯೊಳಗೆ ಹೋಗುತ್ತದೆ ಎಂಬುದು ಮಿಥ್ಯ.

ಮಿಥ್ಯ 3: ಮೂತ್ರ ವಿಸರ್ಜನೆಗೆ ಕಷ್ಟವಾಗುತ್ತದೆ

ಸತ್ಯ: ಹಲವು ಹೆಣ್ಣುಮಕ್ಕಳಿಗೆ ತಮ್ಮ ದೇಹದಲ್ಲಿರುವ ಭಾಗಗಳ ಬಗ್ಗೆ ಸರಿಯಾದ ಅರಿವು ಇಲ್ಲದಿರುವುದೇ ಈ ತಪ್ಪುಕಲ್ಪನೆಗೆ ಕಾರಣ. ಹೆಣ್ಣುಮಕ್ಕಳಲ್ಲಿ ಮೂತ್ರ ವಿಸರ್ಜನೆಯ ದ್ವಾರ ಬೇರೆ ಮತ್ತು ಯೋನಿ ಮಾರ್ಗ ಬೇರೆ. ಕಪ್ ಅನ್ನು ನಾವು ಯೋನಿ ಮಾರ್ಗದಲ್ಲಿ ಇಟ್ಟಿರುತ್ತೇವೆ. ಹಾಗಿರುವಾಗ ಮೂತ್ರ ಮಾಡುವುದಕ್ಕೆ ಯಾವುದೇ ತೊಂದರೆ ಇಲ್ಲ. ಮಲ ಮಾಡುವಾಗಲೂ ಯಾವುದೇ ಸಮಸ್ಯೆ ಉಂಟಾಗುವುದಿಲ್ಲ.

ಮಿಥ್ಯ 4: ಕಪ್ ಧರಿಸುವುದರಿಂದ ನೋವು ಹೆಚ್ಚಾಗುತ್ತದೆ.

ಸತ್ಯ: ಕಪ್‌ಗಳನ್ನು ಮೆಡಿಕಲ್ ಗ್ರೇಡ್ ಸಿಲಿಕೋನ್‌ನಿಂದ ತಯಾರಿಸಲಾಗುತ್ತದೆ. ಆದ್ದರಿಂದ ಇದು ಮೃದುವಾಗಿರುತ್ತದೆ. ಸರಿಯಾದ ಗಾತ್ರದ ಕಪ್ ಆರಿಸಿ, ನಾವು ಯಾವುದೇ ಒತ್ತಡಕ್ಕೆ ಒಳಗಾಗದೆ ಆರಾಮವಾಗಿ ಕಪ್ ಧರಿಸಿದರೆ ನೋವು ಆಗುವುದೇ ಇಲ್ಲ. ನಾವು ಕಪ್ ಧರಿಸಿದ್ದೇವೆ ಎಂಬ ಅನುಭವವೂ ಆಗುವುದಿಲ್ಲ.

ಮಿಥ್ಯ 5: ಕಪ್‌ನಿಂದ ಸೋಂಕು ಉಂಟಾಗುತ್ತದೆ

ಸತ್ಯ: ಸ್ಯಾನಿಟರಿ ಪ್ಯಾಡ್‌ಗಳಿಗೆ, ಬಟ್ಟೆಗಳಿಗೆ ಹೋಲಿಸಿದರೆ ಮುಟ್ಟಿನ ಕಪ್‌ಗಳು ಹೆಚ್ಚು ನೈರ್ಮಲ್ಯಕರವಾಗಿರುತ್ತವೆ. ಆದರೆ ಪ್ರತಿ ಬಾರಿ ಬಳಸುವ ಮುನ್ನ ಮತ್ತು ನಂತರ ಕುದಿಯುವ ನೀರಿನಲ್ಲಿ ಚೆನ್ನಾಗಿ ತೊಳೆದು ಸ್ವಚ್ಛಗೊಳಿಸಬೇಕು. ಯಾವುದೇ ಕಾರಣಕ್ಕೆ ಸೋಪು, ಶಾಂಪು ಮೊದಲಾದವುಗಳನ್ನು ಬಳಸಿ ಕಪ್ ಶುಚಿಗೊಳಿಸಬಾರದು. ನಾವು ಕಪ್ ಯೋನಿಯೊಳಗೆ ಹಾಕುವುದರಿಂದಾಗಿ ಸೋಪಿನ ರಾಸಾಯನಿಕಗಳಿಂದ ಸೋಂಕು ಉಂಟಾಗಬಹುದು. ಕಪ್‌ನ ಬಾಳಿಕೆಯೂ ಕಡಿಮೆಯಾಗಬಹುದು. ಅನೇಕ ತಯಾರಕರು ನಿರ್ದಿಷ್ಟವಾಗಿ ಮುಟ್ಟಿನ ಕಪ್‌ಗಳಿಗಾಗಿಯೇ ವಿಶೇಷ ಕ್ಲೆನ್ಸ ರ್‌ಗಳನ್ನು ಶಿಫಾರಸು ಮಾಡುತ್ತಾರೆ. ಅದನ್ನು ಬಳಸಬಹುದು.

ಮಿಥ್ಯ 6: ಹೆಚ್ಚಿನ ರಕ್ತಸ್ರಾವವಿದ್ದರೆ ಮುಟ್ಟಿನ ಕಪ್ ಸಾಲದು:ಸತ್ಯ: ಪ್ಯಾಡ್‌ಗಳಿಗಿಂತ ಮುಟ್ಟಿನ ಕಪ್ ಹೆಚ್ಚಿನ ಪ್ರಮಾಣದ ರಕ್ತವನ್ನು ಸಂಗ್ರಹಿಸಬಲ್ಲದು. ಅಧಿಕ ರಕ್ತಸ್ರಾವವಿದ್ದರೆ ನಮಗೆ ಮೂತ್ರ ವಿಸರ್ಜನೆ ಮಾಡುವಾಗ ಕಪ್ ಭಾರವಾಗಿದೆ ಎಂಬ ಅನುಭವವಾಗುತ್ತದೆ. ಆ ವೇಳೆ ಕಪ್ ಶುಚಿಗೊಳಿಸಿ ಮತ್ತೆ ಹಾಕಿಕೊಳ್ಳಬಹುದು. ನಾವು ಮುಟ್ಟಿನ ಕಪ್ ಧರಿಸಿ ಈಜು, ವ್ಯಾಯಾಮ ಅಥವಾ ಯೋಗ ಯಾವ ದೈಹಿಕ ಚಟುವಟಿಕೆಗಳನ್ನೂ ಆರಾಮವಾಗಿ ಮಾಡಿಕೊಳ್ಳಬಹುದು.

ಮುಟ್ಟಿನ ಕಪ್‌ನ ಪ್ರಯೋಜನಗಳೇನು?

ಮುಟ್ಟಿನ ಕಪ್‌ಗಳು ಸಾಮಾನ್ಯ ಸ್ಯಾನಿಟರಿ ಪ್ಯಾಡ್‌ಗಳಿಗಿಂತ ಅಧಿಕ ನೈರ್ಮಲ್ಯಕರವಾದದ್ದು. ಮುಟ್ಟಿನ ಕಪ್‌ಗಳನ್ನು 8 ರಿಂದ 12 ಗಂಟೆಗಳ ಕಾಲ ಬಳಸಬಹುದು. ಇದರಿಂದಾಗಿ ಕಾಲೇಜು-ಉದ್ಯೋಗಗಳಿಗೆ ಹೋಗುವ ಮಹಿಳೆಯರು ದಿನಪೂರ್ತಿ ಪ್ಯಾಡ್‌ಗಳನ್ನು ಬದಲಿಸಬೇಕಾದ ಸಮಸ್ಯೆಯಿಲ್ಲ. ಅಷ್ಟು ಮಾತ್ರವಲ್ಲದೆ ಒಮ್ಮೆ 500 ರೂಪಾಯಿಯ ಒಳಗೆ ಹಣ ನೀಡಿ ಖರೀದಿಸಿದರೆ ಮುಟ್ಟಿನ ಕಪ್ ಅನ್ನು 2ರಿಂದ 10 ವರ್ಷಗಳ ಕಾಲ ಬಳಸಬಹುದು. ಪ್ರತಿ ತಿಂಗಳು ಸ್ಯಾನಿಟರಿ ಪ್ಯಾಡ್‌ಗಾಗಿ ಹಣ ವಿನಿಯೋಗಿಸಬೇಕಾಗಿಲ್ಲ. ಜತೆಗೆ ವಿಲೇವಾರಿ ಸಮಸ್ಯೆಗಳನ್ನು ತಪ್ಪಿಸುತ್ತದೆ. ತ್ಯಾಜ್ಯವನ್ನು ಗಣನೀಯವಾಗಿ ಕಡಿಮೆ ಮಾಡುತ್ತವೆ.


ಸದ್ಯ ವಿದ್ಯಾರ್ಥಿನಿಯರಿಗೆ ಶಾಲಾ-ಕಾಲೇಜುಗಳಲ್ಲಿ ಮುಟ್ಟಿನ ಕಪ್ ವಿತರಿಸುವ ಬಗ್ಗೆ ಈ ದಿನ.ಕಾಮ್‌ಗೆ ಪ್ರತಿಕ್ರಿಯಿಸಿರುವ ವೈದ್ಯೆ, ಲೇಖಕಿ ಡಾ. ಎಚ್ ಎಸ್ ಅನುಪಮಾ, ''ಸರ್ಕಾರವು ಮಕ್ಕಳಿಗೆ ಮುಟ್ಟಿನ ಕಪ್ ನೀಡುವುದಕ್ಕೂ ಮುನ್ನ ಹೆಣ್ಣುಮಕ್ಕಳಿಗೆ ಶಾಲೆಗಳಲ್ಲಿ ಯಾವುದೇ ಸಂಕೋಚವಿಲ್ಲದೆಯೇ ತಮ್ಮ ದೇಹ ರಚನೆ ಬಗ್ಗೆ ತಿಳಿಸಬೇಕು. ಹೆಣ್ಣು ಮಕ್ಕಳಿಗೆ ಲೈಂಗಿಕ ಶಿಕ್ಷಣ ನೀಡಬೇಕು. ಲೈಂಗಿಕ ಶಿಕ್ಷಣವೆಂದರೆ ಬರಿ ಸಂಭೋಗವಲ್ಲ. ಬದಲಾಗಿ ಹೆಣ್ಣುಮಕ್ಕಳ ಶರೀರ ರಚನೆ, ಶರೀರ ಕ್ರಿಯೆ, ಪ್ರಜನನ ಕ್ರಿಯೆ ಮೊದಲಾದವುಗಳ ಬಗ್ಗೆ ಪ್ರಾಥಮಿಕ ಮಾಹಿತಿ ನೀಡುವುದು. ಈ ಶಿಕ್ಷಣವನ್ನು ನೀಡದೆಯೇ ಸರ್ಕಾರ ಮುಟ್ಟಿನ ಕಪ್ ವಿತರಿಸಿದರೆ ಅದು ಮೂಲೆ ಸೇರಬಹುದು, ಅದರ ಬಳಕೆಯಾಗುವುದು ಅನುಮಾನ. ಸರ್ಕಾರದ ಉದ್ದೇಶ ಯಶಸ್ವಿಯಾಗುವುದೂ ಅನುಮಾನ'' ಎಂದು ಅಭಿಪ್ರಾಯಿಸಿದ್ದಾರೆ.

ಸ್ತ್ರೀರೋಗ ತಜ್ಞೆ, ಲೇಖಕಿ ಡಾ. ಎಚ್ ಎಸ್ ಅನುಪಮಾ

ವೈದ್ಯರು ಹೇಳುವಂತೆ ಸರ್ಕಾರ ಈ ಯೋಜನೆ ಜಾರಿಗಾಗಿ ಮಾಡಿರುವ ತಯಾರಿ ಬಗ್ಗೆಯೂ ಚರ್ಚೆ ನಡೆಯಬೇಕಿದೆ. ಈ ಹಿಂದೆ ಸರ್ಕಾರ ಶುಚಿ ಯೋಜನೆಯಡಿಯಲ್ಲಿ ಸ್ಯಾನಿಟರಿ ಪ್ಯಾಡ್‌ಗಳನ್ನು ವಿತರಿಸಲು ಆರಂಭಿಸಿತ್ತು. ಆದರೆ ಈ ಪ್ಯಾಡ್‌ಗಳ ಗುಣಮಟ್ಟ ಅತಿ ಕಳಪೆಯಾಗಿತ್ತು. ಬರೀ ನೆಪ ಮಾತ್ರಕ್ಕೆ ವಿತರಿಸುವ ಈ ಪ್ಯಾಡ್‌ಗಳ ಗಾತ್ರ ಮತ್ತು ಹೀರಿಕೊಳ್ಳುವ ಸಾಮರ್ಥ್ಯವು ವಿದ್ಯಾರ್ಥಿನಿಯರಿಗೆ ಬಳಕೆಗೆ ಸಮಸ್ಯೆ ಉಂಟು ಮಾಡಿತ್ತು. ಶಾಲೆಗಳಲ್ಲಿ ಬಳಸಿದ ಪ್ಯಾಡ್‌ಗಳನ್ನು ಸುಡಲು ಇನ್ಸಿ ನರೇಟರ್ () ಯಂತ್ರಗಳ ಕೊರತೆಯೂ ಶಾಲೆಗಳಲ್ಲಿ ನೈರ್ಮಲ್ಯದ ಸಮಸ್ಯೆಗೆ ಕಾರಣವಾಗಿತ್ತು. ಇವೆಲ್ಲವುದರ ನಡುವೆ ಇದೀಗ ಮುಟ್ಟಿನ ಕಪ್ ವಿತರಣೆಗೆ ಸರ್ಕಾರ ಮುಂದಾಗಿದೆ.

ಸ್ಯಾನಿಟರಿ ಪ್ಯಾಡ್‌ಗಳನ್ನು ವಿತರಿಸುವಾಗ ಕೆಲವು ಶಾಲೆಗಳಲ್ಲಿ ಮುಟ್ಟಾದ ಮಕ್ಕಳಿಗೆ ಶಾಲೆಯ ಶಿಕ್ಷಕರು ಪ್ಯಾಡ್ ಬಳಸುವುದು ಹೇಗೆ ಎಂದು ತಿಳಿಸುವುದಿದೆ. ಅದು ಕೆಲವು ಶಾಲೆಗಳಿಗಷ್ಟೇ ಸೀಮಿತ. ಇಂದಿಗೂ ಗ್ರಾಮೀಣ ಭಾಗಗಳಲ್ಲಿ ಮಕ್ಕಳಿಗೆ ಪೋಷಕರೂ ಸ್ಯಾನಿಟರಿ ಪ್ಯಾಡ್ ಬಳಕೆ ಹೇಗೆ ಎಂದು ತಿಳಿಸುವುದಿಲ್ಲ. ಹೀಗಿರುವಾಗ ಮುಟ್ಟಿನ ಕಪ್ ಬಳಕೆ ಬಗ್ಗೆ ತರಬೇತಿ ನೀಡದೆ ಯೋಜನೆ ಅನುಷ್ಠಾನಕ್ಕೆ ತರುವುದು ಈ ಯೋಜನೆ ಬರೀ ಪ್ರಾಯೋಗಿಕವಾಗಿಯೇ ಉಳಿಯುವಂತೆ ಮಾಡಬಹುದು. ಅದಕ್ಕಾಗಿ ಶಾಲೆಗಳಲ್ಲಿ ಮೊದಲು ಶಿಕ್ಷಕರಿಗೆ ತರಬೇತಿ ನೀಡಿ, ಯಾವುದೇ ಸಂಕೋಚವಿಲ್ಲದೆ ಶಿಕ್ಷಕರು ಮಕ್ಕಳಿಗೂ ಅರಿವು ಮೂಡಿಸಲಿ. ಅಂಜಿಕೆ ಬಿಟ್ಟು ನಮ್ಮ ದೇಹವನ್ನು, ದೇಹ ರಚನೆಯನ್ನು ನಾವು ಅರಿಯೋಣ, ಭಯವಿಲ್ಲದೆ ಮುಟ್ಟಿನ ಕಪ್ ಬಳಸೋಣ.

ಬಳ್ಳಾರಿ: ವಿವಿಧೆಡೆ ವೈದ್ಯಕೀಯ ಪದವಿ ಪಡೆಯದೇ ವೈದ್ಯ ವೃತ್ತಿ ಮಾಡುತ್ತಿದ್ದ ನಕಲಿ ವೈದ್ಯರ ಕ್ಲಿನಿಕ್ ಸೀಜ್



ಬಳ್ಳಾರಿ,ಜ.09-

ಜಿಲ್ಲೆಯ ವಿವಿಧೆಡೆ ವೈದ್ಯಕೀಯ ಪದವಿ ಪಡೆಯದೇ ತಾವು ವೈದ್ಯರೆಂದು ಬಿಂಬಿಸಿ ವೈದ್ಯ ವೃತ್ತಿ ಮಾಡುತ್ತಿದ್ದ ನಕಲಿ ವೈದ್ಯರ ಕ್ಲಿನಿಕ್ ಗಳ ಮೇಲೆ ದಾಳಿ ನಡೆಸಿ ಸೀಜ್ ಮಾಡಲಾಗಿದೆ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಯಲ್ಲಾ ರಮೇಶ್ ಬಾಬು ಅವರು ತಿಳಿಸಿದ್ದಾರೆ.

ನಗರದ ಮುಲ್ಲಂಗಿ ಸಂಜೀವಪ್ಪ ಬೀದಿ, ಕೊಳ್ಮಿಚೌಕ್ ಹತ್ತಿರದಲ್ಲಿ ಬಿಸ್ವಾಸ್ ಎಂಬುವವ ಯಾವುದೇ ವೈದ್ಯಕೀಯ ಪದವಿ ಮಾನ್ಯತೆ ಪಡೆಯದೇ ನಕಲಿ ವೈದ್ಯನಾಗಿದ್ದು, ತಾನು ಫೈಲ್ಸ್ ವೈದ್ಯನೆಂದು ಸಾರ್ವಜನಿಕರಲ್ಲಿ ಸುಳ್ಳು ಹೇಳಿ ರೋಗಿಗಳಿಗೆ ಚಿಕಿತ್ಸೆ ನೀಡುತ್ತಿದ್ದ. ಸಾರ್ವಜನಿಕರಿಂದ ದೂರು ಬಂದ ಮೇಲೆ ಕ್ಲಿನಿಕ್ ಮೇಲೆ ದಾಳಿ ಮಾಡಿ ಕ್ಲಿನಿಕ್ ಸೀಜ್ ಮಾಡಲಾಗಿದೆ.

ಕುಡುತಿನಿ ಗ್ರಾಮದಲ್ಲಿ ಮತ್ತೊಬ್ಬ ನಕಲಿ ವೈದ್ಯ ಎಮ್.ಡಿ ಗೌಸ್, ಸಾರ್ವಜನಿಕರಿಗೆ ವೈದ್ಯನೆಂದು ಬಿಂಬಿಸಿ ಯಾವುದೇ ವೈದ್ಯಕೀಯ ಪದವಿ ಪಡೆಯದೇ ಕೇವಲ 10ನೇ ತರಗತಿಯವರೆಗೆ ಓದಿ, ಔಷಧಿಗಳ ಬಗ್ಗೆ ಮಾಹಿತಿ ಪಡೆದುಕೊಂಡು ರೋಗಿಗಳಿಗೆ ಚಿಕಿತ್ಸೆ ನೀಡುತ್ತಿದ್ದ ವೇಳೆ ಕ್ಲಿನಿಕ್ ಮೇಲೆ ದಾಳಿ ಮಾಡಿ ಕ್ಲಿನಿಕ್‌ನ್ನು ಸೀಜ್ ಮಾಡಲಾಗಿದೆ.

ಅದೇರೀತಿಯಾಗಿ ಬಳ್ಳಾರಿ ತಾಲ್ಲೂಕಿನ ಸಿರಿವಾರ ಗ್ರಾಮದಲ್ಲಿ ಡಾ.ಪ್ರಕಾಶ್ ಎಂಬುವವರು, ಬಿ.ಎ.ಎಮ್.ಎಸ್ ವಿದ್ಯಾರ್ಹತೆ ಪಡೆದು ಚಿಕಿತ್ಸೆ ನೀಡುತ್ತಿದ್ದು, ಕೆ.ಪಿ.ಎಮ್.ಇ ಕಾಯ್ದೆ ಕಾಯ್ದೆ ಉಲ್ಲಂಘನೆ ಮಾಡಿರುವುದು ಕಂಡುಬಂದಿದೆ. ಇವರ ಎಮ್.ಜಿ. ಕ್ಲಿನಿಕ್ ಅನ್ನು ಸಹ ಸೀಜ್ ಮಾಡಲಾಗಿದೆ.

ಹಾಗಾಗಿ ಸಾರ್ವಜನಿಕರು ತಮ್ಮ ಆರೋಗ್ಯದ ದೃಷ್ಟಿಯಿಂದ ಅಧೀಕೃತ ವೈದ್ಯ ಪದವಿ ಪಡೆದ ವೈದ್ಯರ ಬಳಿ ತಪಾಸಣೆ ಮಾಡಿಸುವ ಮೂಲಕ ಚಿಕಿತ್ಸೆ ಪಡೆಯುವುದರಿಂದ ಆರೋಗ್ಯದ ಮೇಲೆ ಉಂಟಾಗಬಹುದಾದ ಗಂಭೀರ ಪರಿಣಾಮಗಳನ್ನು ತಡೆಯಬಹುದಾಗಿದೆ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಯಲ್ಲಾ ರಮೇಶ್ ಬಾಬು ಅವರು ಹೇಳಿದ್ದಾರೆ.

ಗ್ರಾಮಗಳಲ್ಲಿ ವೈದ್ಯ ವೃತ್ತಿ ಮಾಡುತ್ತಿರುವವರು ಕಂಡುಬಂದಲ್ಲಿ ಸಾರ್ವಜನಿಕರು ಅವರ ವೈದ್ಯಕೀಯ ಪದವಿಯ ಮಾಹಿತಿಯನ್ನು ಪಡೆದುಕೊಂಡು ಚಿಕಿತ್ಸೆ ಪಡೆಯಬೇಕು. ಒಂದು ವೇಳೆ ನಕಲಿ ವೈದ್ಯರು ಎಂದು ಕಂಡುಬಂದಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಕಾರ್ಯಾಲಯಕ್ಕೆ ದೂರು ನೀಡಿದರೆ ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ ಅಧಿನಿಯಮ 2007 ರ ಅಡಿಯಲ್ಲಿ ಕ್ರಮ ಜರುಗಿಸಬಹುದಾಗಿದೆ ಎಂದು ಅವರು ತಿಳಿಸಿದ್ದಾರೆ.

ದಾಳಿಯ ಸಂದರ್ಭದಲ್ಲಿ ತಾಲ್ಲೂಕು ಆರೋಗ್ಯಾಧಿಕಾರಿ ಡಾ.ಆರ್.ಅಬ್ದುಲ್ಲಾ ಮತ್ತು ಜಿಲ್ಲಾ ಆರ್.ಸಿ.ಹೆಚ್ ಅಧಿಕಾರಿ ಡಾ.ಹನುಮಂತಪ್ಪ, ಆರೋಗ್ಯ ನಿರೀಕ್ಷಣಾಧಿಕಾರಿ ಕೆ.ಹೆಚ್ ಗೋಪಾಲ್, ಆರ್.ಬಿ.ಎಸ್.ಕೆ ಸಮಾಲೋಚಕ ಮನೋಹರ್ ಹಾಗೂ ವೈದ್ಯರು ಇದ್ದರು.

ದೇಶದ ಆರ್ಥಿಕ ಸುಧಾರಣೆಗೆ ಕೈಗಾರಿಕೆಗಳ ಕೊಡುಗೆ ಅವಶ್ಯ : ಅಂಗಡಿ



ಬಾಗಲಕೋಟೆ,ಜ.09-

ದೇಶದ ಆರ್ಥಿಕ ಸ್ಥಿತಿ ಸುಧಾರಿಸುವಲ್ಲಿ ಕೈಗಾರಿಕೆಗಳ ಪಾತ್ರ ಮುಖ್ಯವಾಗಿದ್ದು, ಕೈಗಾರಿಕೆಗಳು ಬೆಳೆಯಲು ಬ್ಯಾಂಕರ್ಸ್ ಸಹಕಾರ ನೀಡಿದಾಗ ಮಾತ್ರ ಸಾಧ್ಯವಾಗುತ್ತದೆ ಎಂದು ಬಿ.ವಿ.ವಿ ಸಂಘದ ಆರ್.ಸೆಟಿ ವ್ಯವಸ್ಥಾಪಕ ನಿರ್ದೇಶಕ ಬಿ.ಎಸ್.ಅಂಗಡಿ ಹೇಳಿದರು.

ನಗರದ ಖಾಸಗಿ ಹೋಟೇಲ್ ಒಂದರಲ್ಲಿ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ,ಜಿಲ್ಲಾ ಕೈಗಾರಿಕೆ ಕೇಂದ್ರ ಮತ್ತು ಕರ್ನಾಟಕ ಸ್ಟೇಟ್ ಮಾರ್ಕೆಟಿಂಗ್ ಕಮ್ಯೂನಿಕೇಷನ್ ಅಡ್ವರ್ಟೈಸಿಂಗ್ ಲಿ ಬೆಂಗಳೂರು ಸಂಯುಕ್ತ ಆಶ್ರಯದಲ್ಲಿ ರ್‍ಯಾಂಪ್ ಅಡಿ ಎಮ್‌ಎಸ್‌ಎಮ್‌ಇ ಇಕೋಸಿಸ್ಟೇಮ್ ಅರಿಯಿರಿ ವಿಷಯದ ಕುರಿತು ಬ್ಯಾಂಕರ್ಸ್ ಹಾಗೂ ವಿವಿಧ ಇಲಾಖಾ ಅಧಿಕಾರಿಗಳಿಗೆ ಆಯೋಜಿ ಸಲಾಗಿದ್ದ ಒಂದು ದಿನದ ಕಾರ್ಯ ಗಾರ ಉದ್ಘಾಟಿಸಿ ಮಾತನಾಡಿದ ಅವರು, ಕೈಗಾರಿಕೆಗಳಲ್ಲಿ ಶಿಸ್ತು ಮತ್ತು ಬದ್ದತೆ ತರಲು, ಕೈಗಾರಿಕೆ ಅಭಿವೃದ್ದಿ ರಾಂಪ್ ಯೋಜನೆ ಉದ್ಯಮಗಳಲ್ಲಿ ತ್ಯಾಜ್ಯ ನಿರ್ವಹಣೆ,ಇಂಧನ ದಕ್ಷತೆ ಮತ್ತು ಮರುಬಳಕೆ ತಂತ್ರಜ್ಞಾನಗಳನ್ನು ಅಳವಡಿಸಿಕೊಳ್ಳಲು ಉತ್ತೇಜಿಸುತ್ತಿದ್ದು ಇಲಾಖಾ ಅಧಿಕಾರಿಗಳು ಪೂರಕವಾಗಿ ಕಾರ್ಯನಿರ್ವಹಿಸಬೇಕಾಗುತ್ತದೆ ಎಂದರು. .

ಜಿಲ್ಲಾ ಕೈಗಾರಿಕಾ ಕೇಂದ್ರದ ಜಂಟಿ ನಿರ್ದೇಶಕ ಪ್ರಶಾಂತ ಬಾರಿಗಿಡದ ಮಾತನಾಡಿ ಉದ್ಯೋಗಿಗಳ ಆರೋಗ್ಯ ಮತ್ತು ಸುರಕ್ಷತೆ ರಾಂಪ್ ಯೋಜನೆಯ ಮತ್ತೊಂದು ಪ್ರಮುಖ ಅಂಶವಾಗಿದ್ದು ಕಾರ್ಮಿಕರಿಗೆ ಸುರಕ್ಷತೆ ಕೆಲಸದ ವಾತಾವರಣ,ಲಿಂಗ ಸಮಾನತೆ ಹಾಗೂ ನ್ಯಾಯಯುತ ವೇತನದಂತಹ ಸಾಮಾಜಿಕ ಅಂಶಗಳನ್ನು ಪಾಲಿಸುವುದು ಕೇವಲ ಕಾನೂನು ಬದ್ದತೆಯಷ್ಟೆ ಅಲ್ಲ ಉದ್ಯಮಗಳ ಘನತೆಯನ್ನು ಹೆಚ್ಚಿಸುವ ಪ್ರಮೂಖ ಅಂಶವಾಗಿದೆ. ಸಾಂಪ್ರದಾಯಕ ಉದ್ಯಮಗಳು ಹಳೆಯ ಪದ್ದತಿಯಿಂದ ಹೊರಬಂದು ಪರಿಸರಕ್ಕೆ ಹಾನಿಯಾಗದ ಹೊಸ ತಂತ್ರಜ್ಞಾನಗಳನ್ನು ಅಳವಡಿಸಿಕೊಳ್ಳಲು ರಾಂಪ್ ಯೋಜನೆ ಪರಿಣಾಮಕಾರಿ ವೇದಿಕೆ ಒದಗಿಸಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ನಿವೃತ್ತ ಎಂಎಸ್ಎಂಇ - ಡಿಎಫ್ಓ ಗೋಪಿನಾಥ ರಾವ್ ಸಂಪನ್ಮೂಲ ವ್ಯಕ್ತಿಯಾಗಿ ವಿವಿಧ ವಿಷಯಗಳ ಕುರಿತು ಉಪನ್ಯಾಸ ನೀಡಿದರು. ಕೆ.ಎಸ್.ಎಫ್.ಸಿ ಉಪವ್ಯವಸ್ಥಾಪಕ ಮಂಜುನಾಥ ಎಂ, ಕೆನರಾ ಜಿಲ್ಲಾ ಅಗ್ರಣೀಯ ಬ್ಯಾಂಕ್ ವ್ಯವಸ್ಥಾಪಕ ದಯಾನಂದ ಕಾಳಗಿ, ವಿವಿಧ ಬ್ಯಾಂಕ್ ಅಧಿಕಾರಿಗಳು ಮತ್ತು ಸಿಬ್ಬಂದಿ ಉಪಸ್ಥಿತರಿದ್ದರು.

Printed and Published by: SUNDAR and Owned by: SUNDAR Printed at: SHILPA PUBLICATIONS AND PRINTING PRESS, No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Published at: No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Editor: SUNDAR